

MAG(2)PRB/CR/165/2022-23

# ಮುಂಜಾನೆ ವಾರ್ತೆ

Title code: KARKAN27951

ಇ–ಪೇಪರ್: www.munjanevarthe.com

EDITOR: H.L.AMARANATH

MUNJANE VARTHE

ಸಂಪಾದಕ: ಹೆಚ್.ಎಲ್ ಅಮರನಾಥ್

ಕನ್ನಡ ದಿನಪತ್ರಿಕೆ

VOLUME : 2 ISSUE: 136 ಸಂಪುಟ: 02 ಸಂಚಿಕೆ: 136 ಪುಟಗಳು: 04 munjanevarthe 01 MONDAY JULY 2024 01 ಸೋಮವಾರ ಜುಲೈ 2024 ₹ 2



ಜಾಹೀರಾತಿಗಾಗಿ ಸಂಪರ್ಕಿಸಿ
9663122276
www.munjanevarthe.com



ಭದ್ರಾವತಿಯ VISL ಕಾರ್ಖಾನೆ ಪುನಶ್ಚೇತನದ ಕುರಿತು ತೀರ್ಮಾನ
ವಿವರಪುಟ 02

ನಿವೃತ್ತ ಉಪ ವಲಯ ಅರಣ್ಯಾಧಿಕಾರಿ ಅಣ್ಣಪ್ಪ ಅವರಿಗೆ ಬೀಳ್ಕೊಡುಗೆ ಸಮಾರಂಭ
ವಿವರಪುಟ 03

ಅನಾಹುತಗಳ ತಡೆಗೆ ಮುಂಜಾಗ್ರತೆವಹಿಸಲು ಸೂಚನೆ
ವಿವರಪುಟ 04


# ಸಿಎಂ ಬದಲಿಸಿದರೆ ಹೋರಾಟ ಖಚಿತ

ರಾಜ್ಯದಲ್ಲಿ ಸಿಎಂ ಬದಲಾವಣೆ ವಿಚಾರ ಬಹಳ ಸದ್ದು ಮಾಡುತ್ತಿದ್ದು, ಇದರ ಬೆನ್ನಲ್ಲೇ ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರೆ ರಾಜ್ಯಾದ್ಯಂತ ಬೃಹತ್ ಹೋರಾಟಗಳನ್ನು ನಡೆಸುತ್ತೇವೆಂದು ಅಹಿಂದ ರಾಜ್ಯಾಧ್ಯಕ್ಷ ಪ್ರಭುಲಿಂಗ ದೊಡ್ಡಣಿ ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ ಹುಬ್ಬಳಿಯಲ್ಲಿ ಮಾತನಾಡಿದ ಅವರು, 5 ವರ್ಷ ಕಾಲ ಸಿದ್ದರಾಮಯ್ಯನವರೇ ಮುಖ್ಯಮಂತ್ರಿ ಆಗಿರಬೇಕು. ಸಿದ್ದರಾಮಯ್ಯ ಅವರಿಂದಲೇ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದರೆ ಬೃಹತ್ ಹೋರಾಟ ಮಾಡುವುದಾಗಿ ತಿಳಿಸಿದ್ದಾರೆ.



ಕೆಲವು ಸ್ವಾಮೀಜಿಗಳು ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಮಾತನಾಡುತ್ತಿದ್ದಾರೆ. ಸ್ವಾಮೀಜಿಗಳು ರಾಜಕೀಯ ಹೇಳಿಕೆ ನೀಡುವುದು ಧಾರ್ಮಿಕ ವಿಚಾರಗಳಿಗೆ ಧಕ್ಕೆ ತರುತ್ತವೆ. ಚಂದ್ರಶೇಖರ ಸ್ವಾಮೀಜಿ ಅವರದ್ದು ವೈಯಕ್ತಿಕ ಅಭಿಪ್ರಾಯ. ಅವರ ಅಭಿಪ್ರಾಯಕ್ಕೆ ಕಾಂಗ್ರೆಸ್ ಮಣೆಹಾಕಬಾರದು ಎಂದಿದ್ದಾರೆ.

ಮುಖ್ಯಮಂತ್ರಿ ಬದಲಾವಣೆ ಆದ್ರೆ, ಕಾಂಗ್ರೆಸ್ ಅಸ್ತಿತ್ವ ಕಳೆದುಕೊಳ್ಳುತ್ತದೆ. ಅಹಿಂದ ನಾಯಕರನ್ನು ತುಳಿಯುವ ಕೆಲಸ ನಡೆಯುತ್ತಿದೆ. ಪ್ರತಿ ಜಿಲ್ಲೆಯಲ್ಲೂ ಅಹಿಂದ ಸಂಘಟನೆ ಮಾಡಿದ್ದೇವೆ. ರಾಜ್ಯದ ಜನರು ಸಿದ್ದರಾಮಯ್ಯ ಅವರ ಬೆನ್ನಿಗೆ ನಿಂತಿದ್ದಾರೆ. ಅವರ ಕಾರಣಕ್ಕಾಗಿಯೇ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ ಎಂದು ಹೇಳಿದ್ದಾರೆ.

## ಸೋನಿಯಾ ಗಾಂಧಿ ಕೊಟ್ಟಿದ್ರಾ ಸೀಕ್ರೆಟ್ ಟಾಸ್ಕ್? ನಂಬಬೇಡಿ ಎಂದ ಡಿಕೆಶಿ!



ಬೆಂಗಳೂರು : ಆಂಧ್ರದ ಮಾಜಿ ಸಿಎಂ ಜಗನ್ ಮೋಹನ್ ರೆಡ್ಡಿ ಅವರನ್ನು ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿಕೆ ಶಿವಕುಮಾರ್ ಅವರು ಭೇಟಿಯಾಗಿ ಸೀಕ್ರೆಟ್ ಆಗಿ ಮಾತುಕತೆ ನಡೆಸಿದ್ದಾರೆ. ಆಂಧ್ರದ ವಿಧಾನಸಭೆ ಚುನಾವಣೆಯಲ್ಲಿ ಹೀನಾಯವಾಗಿ ಸೋತ ಬಳಿಕ ತಮ್ಮ ಜಖಖಅಕ ಪಕ್ಷವನ್ನು ಉಳಿಸಲು ಜಗನ್ ಕಾಂಗ್ರೆಸ್ ಮೊರೆ ಹೋಗಿದ್ದಾರೆ ಎನ್ನಲಾಗಿತ್ತು. ಒಂದೆಡೆ ಕಾಂಗ್ರೆಸ್ ಅಧಿ ನಾಯಕಿ ಸೋನಿಯಾ ಗಾಂಧಿ ಅವರು ಜಗನ್ ಜೊತೆ ಮಾತನಾಡಿ, ಕಾಂಗ್ರೆಸ್ ಜೊತೆಗೆ ಜಗನ್ಗೆ ತಮ್ಮ ಪಕ್ಷವನ್ನು ವಿಲೀನ ಮಾಡಿಸುವಂತೆ ಡಿಕೆಶಿ ಅವರಿಗೆ ಟಾಸ್ಕ್ ನೀಡಿದ್ದಾರೆ ಎಂದೂ ಸುದ್ದಿ ಹರಿದಾಡಿತ್ತು. ಹೀಗಾಗಿ ಡಿಕೆಶಿ ಜಗನ್ ಅವರಿಗೆ ಭೇಟಿಯಾಗಿದ್ದಾರೆಂಬ ವದಂತಿ ಹಬ್ಬಿತ್ತು. ಇದೀಗ ಈ ಎಲ್ಲಾ ವದಂತಿಗಳಿಗೆ ಡಿಕೆಶಿ ಅವರು ಟ್ವೀಟ್ ಮಾಡುವ ಮೂಲಕ ತೆರೆ ಎಳೆದಿದ್ದಾರೆ. 'ನಾನು ಆಂಧ್ರಪ್ರದೇಶ ಮಾಜಿ ಸಿಎಂ ಜಗನ್ ಮೋಹನ್ ರೆಡ್ಡಿ ಅವರನ್ನು ಭೇಟಿ ಮಾಡಿರುವಂತೆ ಯಾರೋ ಕಿಡಿಗೇಡಿಗಳು ನಕಲಿ ಫೋಟೋ ಸೃಷ್ಟಿಸಿ ಹರಡುತ್ತಿದ್ದಾರೆ. ನಾನು ಜಗನ್ ಮೋಹನ್ ರೆಡ್ಡಿ ಅವರನ್ನು ಭೇಟಿ ಮಾಡಿಲ್ಲ. ಯಾರೂ ಕೂಡ ಇದನ್ನು ನಂಬಬಾರದು' ಎಂದು ಡಿಕೆಶಿ ತಮ್ಮ 'ಘ' ಖಾತೆಯಲ್ಲಿ ಬರೆದುಕೊಂಡಿದ್ದಾರೆ.

## ಕಾಂಗ್ರೆಸ್ಸಿನಲ್ಲಿ ಒಳಬೇಗುದಿ.. ಸರ್ಕಾರ ಪತನಕ್ಕೆ ಹಾದಿ



ಹುಬ್ಬಳ್ಳಿ : ರಾಜ್ಯದಲ್ಲಿ ಆಡಳಿತ ಕುಸಿತವಾಗಿದ್ದು, ಕಾಂಗ್ರೆಸ್ ಶಾಸಕರೇ ಸರ್ಕಾರಕ್ಕೆ ಅಪಾಯ ತಂದೊಡ್ಡುತ್ತಿದ್ದಾರೆ ಎಂದು ಸಂಸದ ಜಗದೀಶ್ ಶೆಟ್ಟರ್ ಟೀಕಿಸಿದರು. ಈ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಕಾಂಗ್ರೆಸ್ಸಿಗರಲ್ಲೇ ಒಳಬೇಗುದಿ ಕುದಿಯುತ್ತಿದ್ದು, ಅದರಿಂದಲೇ ಸರ್ಕಾರ ಪತನವಾಗಲಿದೆ ಎಂದು ಸ್ಫೋಟಕ ಹೇಳಿಕೆ ನೀಡಿದರು.

ಇನ್ನು ಪಠ್ಯ ಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಸರ್ಕಾರ ಮಾಡಿದ ಯಡವಟ್ಟು ಸಮಾಜದಲ್ಲಿ ಸಂಘರ್ಷಗಳು ಉಂಟಾಗಲು ಕಾರಣವಾಗುತ್ತದೆ. ಈ ಬಗ್ಗೆ ಸರ್ಕಾರ ಕಿಂಚ್ಚಿತ್ತೂ ಯೋಚನೆ ಮಾಡುತ್ತಿಲ್ಲ. ಇದರಿಂದ ಕಾಂಗ್ರೆಸ್ ಸರ್ಕಾರಕ್ಕೆ ದೊಡ್ಡಪೆಟ್ಟು ಬೀಳಲಿದೆ ಎಂದು ಎಚ್ಚರಿಕೆ ಕೊಟ್ಟರು.

ಇದಲ್ಲದೇ ಸರ್ಕಾರ ತೈಲ, ಹಾಲಿನ ದರ ಏರಿಕೆ ಮಾಡುವುದರಿಂದ ಹಿಡಿದು ಪ್ರತಿಯೊಂದು ವಿಚಾರದಲ್ಲೂ ರಾಜ್ಯದ ಜನರಿಗೆ ಅನ್ಯಾಯ ಮಾಡುತ್ತಲೇ ಮುಂದುವರಿಯುತ್ತಿದೆ ಎಂದು ಕಿಡಿಕಾರಿದರು.

## ಸಿಎಂ ಬಣದ ವಿರುದ್ದ ಹೈಕಮ್ಯಾಂಡ್‌ಗೆ ಡಿಕೆಶಿ ದೂರು!

ನವದೆಹಲಿ : ಹೆಚ್ಚುವರಿ ಡಿಸಿಎಂ ಹುದ್ದೆ ಸೃಷ್ಟಿ ಸೇರಿದಂತೆ ಇತರೆ ವಿಷಯಗಳ ಬಗ್ಗೆ ಹೇಳಿಕೆ ನೀಡುತ್ತಾ ರಾಜಕೀಯ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬಳಿ ದೂರಿಕೊಂಡಿದ್ದಾರೆ. ದೆಹಲಿ ಭೇಟಿಯ ವೇಳೆ ಡಿಕೆಶಿ ಈ ಪ್ರಸ್ತಾಪವೆತ್ತಿದ್ದು, ಸಿಎಂ ಸಿದ್ದರಾಮಯ್ಯ ಆಪ್ತರಾದ ರಾಜಣ್ಣ ಮುಂತಾದ ಸಚಿವರಿಗೆ ಎಚ್ಚರಿಕೆ ನೀಡುವಂತೆ ಆಗ್ರಹಿಸಿದ್ದಾರೆ.

ಡಿಕೆಶಿ ದೂರನ್ನು ಆಲಿಸಿದ ಮಲ್ಲಿಕಾರ್ಜುನ ಖರ್ಗೆ ಸಮಾಧಾನದಿಂದ ಇರುವಂತೆ ಸೂಚಿಸಿದ್ದು, ಅವರ ಹೇಳಿಕೆಗಳ ಬಗ್ಗೆ ನೀವು ತಲೆ ಕೆಡೆಸಿಕೊಳ್ಳಬೇಡಿ ಎಂದು ಸಂತೈಸಿದ್ದಾರೆ. ಸಿಎಂ ಆಪ್ತರ ಹೇಳಿಕೆಗಳ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡದಂತೆ ಖರ್ಗೆ ಹೇಳಿದ್ದು, ಈ ಬಗ್ಗೆ ಕಾಂಗ್ರೆಸ್



ವರಿಷ್ಠರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿಯವರ ಬಳಿ ಈ ಬಗ್ಗೆ ಚರ್ಚಿಸುವುದಾಗಿ ಹೇಳಿ ಕಳುಹಿಸಿದ್ದಾರೆ.

ರಾಜ್ಯದಲ್ಲಿ ಕೆಲವು ದಿನಗಳಿಂದ ಹೆಚ್ಚುವಿರ ಡಿಸಿಎಂ ಹುದ್ದೆ ಸೃಷ್ಟಿಯ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಬಗ್ಗೆ ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಧ ಡಿಕೆಶಿ ಶಾಸಕರು, ಸಚಿವರಿಗೆ ವಾರ್ನಿಂಗ್ ನೀಡಿದ್ದರೂ ಸಹ ಹೇಳಿಕೆಗಳು ನಿಂತಿಲ್ಲ. ಇದು ಕಾಂಗ್ರೆಸ್ ಗೆ ನುಂಗಲಾರದ ತುತ್ತಾಗಿ ಪರಿಣಮಿಸಿದ್ದು, ಬಿಜೆಪಿ ಮತ್ತು ಜೆಡಿಎಸ್ ಪಕ್ಷಕ್ಕೆ ಟೀಕೆಯ ವಸ್ತುವಾಗಿ ಪರಿಣಮಿಸಿದೆ.

## ಸ್ವಪಕ್ಷ ಶಾಸಕನ ವಿರುದ್ಧವೇ ಸಚಿವ ಸತೀಶ್ ಜಾರಕಿಹೊಳಿ ಗರಂ!

ಬೆಳಗಾವಿ: ಲೋಕಸಭೆ ಚುನಾವಣೆ ವೇಳೆ ಸೋಲಿಸಲು ಎಲ್ಲಿಂದ ನಿರ್ದೇಶನ ಬಂದಿದೆ ಎಂದು ಗೊತ್ತಿತ್ತು ಎಂದು ಸ್ವಪಕ್ಷದ ಶಾಸಕ ಮಹೇಂದ್ರ ತಮ್ಮಣ್ಣವರ ವಿರುದ್ಧವೇ ಸಚಿವ ಸತೀಶ್ ಜಾರಕಿಹೊಳಿ ಮತ್ತೆ ಕಿಡಿಕಾರಿದರು.

ಹಾರೂಗೇರಿಯಲ್ಲಿ ಮಾತನಾಡಿದ ಅವರು, ಚುನಾವಣೆ ಸಂದರ್ಭದಲ್ಲಿ ಮಾಜಿ ಶಾಸಕ ಶ್ಯಾಮ್ ಘಾಟಗೆ ಅವರು ಏನು ಮಾಡಿದರು ಎಂದು ಕುಟುಕಿದ ಜಾರಕಿಹೊಳಿ, ಘಾಟಗೆ ಅವರು ಕುಸ್ತಿ ಆಡಿ ನಮ್ಮ ಚುನಾವಣೆಗೆ ಯಾಕೆ ತೊಂದರೆ ಮಾಡಿದ್ದೀರಿ? ನಿಮಗೆ ಟಿಕೆಟ್ ಕೊಡಿಸಿ ಸಪೋರ್ಟ್ ಮಾಡಿದ್ವಿ, ನೀವು ಯಾಕೆ ಹೀಗೆ ಮಾಡಿದ್ರಿ ಎಂದು ಸತೀಶ್ ಅವರು ವಾಗ್ದಾಳಿ ನಡೆಸಿದರು.

22 ಸಾವಿರ ಲೀಡ್ ಕೊಟ್ಟಿದ್ದೇನೆ ಎಂದಿದ್ದ ಮಹೇಂದ್ರ ತಮ್ಮಣ್ಣವರಿಗೆ ಕುಡಚಿ ಒಂದೇ ಊರಲ್ಲಿ 18 ಸಾವಿರ ಮತಗಳು ಬಂದಿವೆ. ಇನ್ನು ನಾಲ್ಕು ಸಾವಿರ ಮತಗಳು ಮಾತ್ರ ಉಳಿದಿದ್ದವು. ಕಳೆದ ಬಾರಿ ನಿಮಗೆ ಬಿದ್ದ ಮತಗಳು ಕೂಡ ಬಿಜೆಪಿಗೆ ಹೋಗಿವೆ ಎಂದು ವ್ಯಂಗ್ಯವಾಡಿದರು.

## ಸ್ಥಾನ ಭದ್ರಪಡಿಸಲು ದೆಹಲಿಯಲ್ಲಿ ಸಿಎಂ, ಡಿಸಿಎಂ ಪ್ರಯತ್ನ

ಬೆಂಗಳೂರು: ಕರ್ನಾಟಕದಲ್ಲಿ ಅಭಿವೃದ್ಧಿ ಸಂಪೂರ್ಣವಾಗಿ ನೆಲ ಕಚ್ಚಿದೆ. ಈ ಹಿನ್ನೆಲೆಯಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು (ದೆಹಲಿಯಲ್ಲಿ ಪ್ರಯತ್ನ ನಡೆಸಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್



ಟೀಕಿಸಿದರು. ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಭಾನುವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯನವರು ಕಳೆದೊಂದು ವರ್ಷದಲ್ಲಿ ವಿಫಲರಾದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮುಖ್ಯಮಂತ್ರಿ ಯಾರಾಗಬೇಕು ಎಂಬುದರ ಬಗ್ಗೆ ಈಗ ದೆಹಲಿಯಲ್ಲಿ ವಿಪರೀತ ಚರ್ಚೆ ನಡೆಯುತ್ತಿದೆ. ರಾಜ್ಯದಲ್ಲಿ ಅಭಿವೃದ್ಧಿ ಸಂಪೂರ್ಣ ಸ್ಥಗಿತವಾಗಿದೆ, ಗ್ಯಾರಂಟಿಗಳನ್ನು ಸರಿಯಾಗಿ ತಲುಪಿಸುತ್ತಿಲ್ಲ, ಭ್ರಷ್ಟಾಚಾರ ಮೇರೆ ಮೀರಿದೆ ಎಂದು ಟೀಕಿಸಿದರು. ಹುಚ್ಚುಂಡೆ ಮದುವೆಯಲ್ಲಿ ಉಂಡವನೇ ಜಾಣ ಎಂಬಂತೆ ಮಂತ್ರಿಗಳು ತಮ್ಮ ಸ್ಥಾನ ಭದ್ರಪಡಿಸಿಕೊಳ್ಳುತ್ತಿದ್ದಾರೆ. ಕೆಲವು ಸಚಿವರು ಡಿಸಿಎಂ ಆಗಲು ಪ್ರಯತ್ನ ಮಾಡುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಅವರನ್ನು ಏನಾದರೂ ಮಾಡಿ ಮುಖ್ಯಮಂತ್ರಿಯಾಗಿ ಮಾಡಲು ಅವರ ಪರ ಇರುವವರಿಂದ ಪ್ರಯತ್ನ ನಡೆದಿದೆ. ಇದೆಲ್ಲವನ್ನೂ ನೋಡಿದರೆ ಕರ್ನಾಟಕದಲ್ಲಿ ಅಭಿವೃದ್ಧಿಗೆ ಜಾಗ ಇಲ್ಲ ಎಂಬಂತಾಗಿದೆ ಎಂದು ಆಕ್ಷೇಪಿಸಿದರು.

## ಉಪಚುನಾವಣೆಗೆ ಬಿಜೆಪಿ-ಜೆಡಿಎಸ್ ಮೈತ್ರಿ ಅಚ್ಚರಿ ಅಭ್ಯರ್ಥಿ ಇವರೇ ಅಂತೆ!



ರಾಮನಗರ : ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾದ ಕಾರಣಕ್ಕೆ ತೆರವಾದ ಚನ್ನಪಟ್ಟಣ ವಿಧಾನಸಭೆ ಕ್ಷೇತ್ರಕ್ಕೆ ಉಪಚುನಾವಣೆ ನಡೆಯಬೇಕಿದೆ. ಈಗಾಗಲೇ ಬೈ ಎಲೆಕ್ಷನ್ ಕಾವು ತೀವ್ರ ಪಡೆದುಕೊಂಡಿದ್ದು, ಚನ್ನಪಟ್ಟಣ ವಶಕ್ಕೆ ಅತ್ತ ಕಾಂಗ್ರೆಸ್ ಅಚ್ಚರಿಯ ಅಭ್ಯರ್ಥಿ ಆಯ್ಕೆಗೆ? ಪ್ಲಾನ್ ಮಾಡುತ್ತಿರುವ ನಡುವೆ ಬಿಜೆಪಿ–ಜೆಡಿಎಸ್ ದೋಸ್ತಿಯು ನಿಖಿಲ್ ಕುಮಾರಸ್ವಾಮಿ ಅಥವಾ ಸಿ.ಪಿ ಯೋಗೇಶ್ವರ್ ಅವರನ್ನು ಕಣಕ್ಕೆ ಇಳಿಸಲಿದೆ ಎಂದೇ ಈವರೆಗೆ ಹೇಳಲಾಗುತಿತ್ತು. ಆದರೆ ಅಚ್ಚರಿ ಎಂಬಂತೆ?ಇದೀಗ ಬಿಜೆಪಿ–ಜೆಡಿಎಸ್‌ನ ಮಾಸ್ಟರ್ ಪ್ಲ್ಯಾನ್ ಬೇರೇನೆ ಮಾಡಿದ್ದು, ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ ಅವರ ಪತ್ನಿ ಅನುಸೂಯಾ ಅವರನ್ನು ಮೈತ್ರಿ ಅಭ್ಯರ್ಥಿಯನ್ನಾಗಿ ಘೋಷಿಸುವ ಬಗ್ಗೆ ದೋಸ್ತಿ ಪಕ್ಷಗಳ ನಾಯಕರು ಚರ್ಚೆ ನಡೆಸಿದ್ದಾರೆ ಎನ್ನಲಾಗುತ್ತಿದೆ. ಒಕ್ಕಲಿಗ ಅಭ್ಯರ್ಥಿಗಳನ್ನೇ ನಿಲ್ಲಿಸಲು ಈಗಾಗಲೇ ಬಿಜೆಪಿ–ಜೆಡಿಎಸ್?, ಕಾಂಗ್ರೆಸ್ ಪ್ಲ್ಯಾನ್ ಸಿದ್ಧಪಡಿಸಿದ್ದು, ಇದರಿಂದ ಚನ್ನಪಟ್ಟಣ ಉಪಚುನಾವಣೆ ಒಕ್ಕಲಿಗರ ಪ್ರಬಲ ನಾಯಕರಿಬ್ಬರ ನಡುವಿನ ಪ್ರತಿಷ್ಠೆಯ ಕಣವಾಗಿ ಮಾರ್ಪಡಲಿದೆ. ಇನ್ನು ಲೋಕಸಭೆ ಚುನಾವಣೆಯಲ್ಲಿ ಈಗಾಗಲೇ ಡಿ.ಕೆ.ಸುರೇಶ್? ಅವರನ್ನು ಡಾ.ಮಂಜುನಾಥ್ ಅವರು ಸೋಲಿನ ರುಚಿ ತೋರಿಸಿದ್ದು ಗೊತ್ತೇ ಇದೆ.

## ಅನುದಾನ ರಹಿತ ಶಾಲೆಗಳ ಒಕ್ಕೂಟದ ವತಿಯಿಂದ ಪತ್ರಿಕಾ ಗೋಷ್ಠಿ

ಚಾಮರಾಜನಗರ : RUPSA(ಅನುದಾನರಹಿತ ಖಾಸಗಿ ಶಾಲೆಗಳ ಒಕ್ಕೂಟ) ಬೆಂಗಳೂರು ವತಿಯಿಂದ ದಿನಾಂಕ: 28–06–2024 ರಂದು ಖಾಸಗಿ ಶಾಲೆಗಳ ಹಲವಾರು ಸಮಸ್ಯೆ ಹಾಗೂ ಕುಂದು ಕೊರತೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವ ಸಲುವಾಗಿ ಬೆಂಗಳೂರಿನ ಪ್ರೆಸ್ ಕ್ಲಬ್ ನಲ್ಲಿ ಪತ್ರಿಕಾಗೋಷ್ಠಿ ನಡೆಯಿತು. ಇದೆ ವೇಳೆ RUPSA ಕರ್ನಾಟಕ ರಾಜ್ಯ ಅಧ್ಯಕ್ಷರಾದ ಶ್ರೀ ಹಾಲನೂರು ಲೇಪಾಕ್ಷ್ ಅವರು




ಮಾತನಾಡಿ ಎಲ್ಲಾ ಖಾಸಗಿ ಶಾಲೆಗಳ ಪಠ್ಯಪುಸ್ತಕಕ್ಕಾಗಿ ಸರ್ಕಾರಕ್ಕೆ ಪೂರ್ಣ ಹಣ ಪಾವತಿ ಮಾಡಿದ್ದರು ಒಂದು ತಿಂಗಳಾದರೂ ಇನ್ನೂ ಪೂರ್ಣ ಪ್ರಮಾಣದ ಪಠ್ಯಪುಸ್ತಕ ನೀಡಿರುವುದಿಲ್ಲ ಹಾಗೂ ಈ ಬಾರಿ 10% ಹಣವನ್ನು ಏಕಾಏಕಿ ಹೆಚ್ಚಿಸಲಾಗಿದೆ ಮತ್ತು ಅತ್ಯಂತ ಕಡಿಮೆ ಅಂತರದಲ್ಲಿ ನಿಯಮಬಾಹಿರವಾಗಿ ಪ್ರಸಕ್ತ ಸಾಲಿನಲ್ಲಿ ನೂತನ ಶಾಲೆಗಳ ಸ್ಥಾಪನೆಗೆ ಅನುಮತಿ ನೀಡಿರುವುದನ್ನು ಹಿಂಪಡೆಯಬೇಕು ಇಲ್ಲವಾದಲ್ಲಿ ಈ ಬಗ್ಗೆ RUPSA ವತಿಯಿಂದ ಹೋರಾಟ ನಡೆಸಲಾಗುತ್ತದೆ ಎಂದು ತಿಳಿಸಿದರು. RUPSA ಕಾರ್ಯದರ್ಶಿಗಳಾದ ಶ್ರೀ ಶಶಿಧರ್ ದಿಂಡೂರ್ ಅವರು ಮಾತನಾಡಿ, ಶಾಲೆಗಳ ಮಾನ್ಯತೆ ನವೀಕರಣದ ಅವಧಿಯನ್ನು 10 ವರ್ಷಗಳಿಗೆ ವಿಸ್ತರಿಸಬೇಕು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯ ನಂತರ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಾದ ಶ್ರೀಮತಿ ಬಿ.ಬಿ.ಕಾವೇರಿ ಅವರನ್ನು ಭೇಟಿ ಮಾಡಿ ಮೇಲಿನ ವಿಚಾರಗಳ ಬಗ್ಗೆ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಗಂಗಾಧರ್ ದೇಶಮುಖ್, ಮಂಜುನಾಥ್ ರೇವಣೇಕರ್, ಚಾಮರಾಜನಗರ ಜಿಲ್ಲಾ ಕಾರ್ಯದರ್ಶಿಗಳಾದ ಮಂಜುನಾಥ್ ಸೇರಿದಂತೆ ಇತರೆ ಶಾಲಾ ಮುಖ್ಯಸ್ಥರು ಹಾಜರಿದ್ದರು ಎಂದು RUPSA ರಾಜ್ಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ ನಂಜುಂಡಸ್ವಾಮಿ ತಿಳಿಸಿದರು.

ವರದಿ: ಆರ್.ಉಮೇಶ್ ಮಲಾರಪಾಳ್ಯ


ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...
www.munjanevarthe.com
ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುಗುವುದು ಈಗ ಮತ್ತಷ್ಟು ಸುಲಭ

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಸೋಮವಾರ 01 ಜುಲೈ 2024
MONDAY 01 July 2024

# ಭದ್ರಾವತಿಯ VISL ಕಾರ್ಖಾನೆ ಪುನಶ್ಚೇತನದ ಕುರಿತು ಮುಂದಿನ ದಿನಗಳಲ್ಲಿ ತೀರ್ಮಾನ: ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ

ಶಿವಮೊಗ್ಗ: ಮೈಸೂರು ಮಹಾರಾಜರಿಂದ, ವಿಶ್ವೇಶ್ವರಯ್ಯನವರ ಪ್ಲಾನ್‌ನಿಂದ ಪ್ರಾರಂಭವಾಗಿದ್ದ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ತೀರ್ಮಾನ ಮಾಡಲಾಗುವುದು ಎಂದು ಕೇಂದ್ರದ ಬೃಹತ್ ಕೈಗಾರಿಕಾ ಹಾಗೂ ಉಕ್ಕು ಖಾತೆ ಸಚಿವ ಹೆಚ್. ಡಿ ಕುಮಾರಸ್ವಾಮಿ ತಿಳಿಸಿದ್ದಾರೆ.

ಸರ್ ಎಂ. ವಿಶ್ವೇಶ್ವರಯ್ಯನವರ ಪುತ್ಥಳಿಗೆ ಪೂಜೆ ಸಲ್ಲಿಸಿದ ಹೆಚ್‌ಡಿ ಕುಮಾರಸ್ವಾಮಿ

ಭಾನುವಾರ ಭದ್ರಾವತಿಯ ಕಾರ್ಖಾನೆಗೆ ಅವರು ಭೇಟಿ ನೀಡಿದ್ದರು. ಕಾರ್ಖಾನೆಯ ಒಳ ಭಾಗದಲ್ಲಿ ಇರುವ ಸರ್ ಎಂ. ವಿಶ್ವೇಶ್ವರಯ್ಯನವರ ಪುತ್ಥಳಿಗೆ ಪೂಜೆ ಸಲ್ಲಿಸಿ, ಹಾರ ಹಾಕಿ, ನಂತರ ಕಾರ್ಖಾನೆಯ ವಸ್ತು ಸ್ಥಿತಿಯನ್ನು ಅವಲೋಕಿಸಿದರು. ನಂತರ ಸೈಲ್? ಅಧಿಕಾರಿಗಳ ಜೊತೆ ಸಭೆ ನಡೆಸಿದ ಬಳಿಕ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು.

ಭದ್ರಾವತಿಯ ಗಿಖಖಐ ಕಾರ್ಖಾನೆಯನ್ನು ಉಳಿಸಬೇಕೆಂಬುದು ಎಲ್ಲರ ಭಾವನೆ. ಹೀಗಾಗಿ ಕಾರ್ಖಾನೆಯ ಸಂಪೂರ್ಣ ಮಾಹಿತಿಯನ್ನು ಪಡೆಯಬೇಕೆಂದೇ ನಾನು ಮತ್ತು ಸೈಲ್‌ನ ಅಧ್ಯಕ್ಷರಾದ ಅಮರೇಂದ್ರ ಪ್ರಕಾಶ್ ಅವರಿಂದ ಮಾಹಿತಿ ಪಡೆದಿದ್ದೇವೆ. ಕಾರ್ಖಾನೆಯ ಆಡಳಿತ ವರ್ಗ ಹಾಗೂ ಕಾರ್ಮಿಕರು ಅವರ ಅನುಭವದ ಮಾಹಿತಿಯನ್ನು ಕೊಟ್ಟಿದ್ದಾರೆ. ಯಾವ ರೀತಿ ಕಾರ್ಖಾನೆಯನ್ನು ಮುಂದಿನ ದಿನಗಳಲ್ಲಿ ಪುನಶ್ಚೇತನಗೊಳಿಸಬಹುದು ಎಂಬ ಮಾಹಿತಿಯನ್ನು ಪಡೆದಿದ್ದೇನೆ ಎಂದರು.

ಕಾರ್ಖಾನೆಯ ವಸ್ತು ಸ್ಥಿತಿ ಅವಲೋಕಿಸಿದ ಹೆಚ್.ಡಿ ಕುಮಾರಸ್ವಾಮಿ

ಈಗ ಕೇಂದ್ರದಲ್ಲಿ ಲೋಕಸಭೆಯ ಕಲಾಪಗಳು ನಡೆಯುತ್ತಿವೆ. ಇದರಿಂದ ಕೆಲವು ನಿರ್ಧಾರಗಳನ್ನು ನಾವು ಸಾರ್ವಜನಿಕವಾಗಿ ಪ್ರಕಟಿಸಲು ಸಾಧ್ಯವಿಲ್ಲ. ರಾಜ್ಯಸಭಾ ಸದಸ್ಯರಾದ ಜಯರಾಂ ರಮೇಶ್ ಅವರು ನಾನು ಅಧಿಕಾರ ವಹಿಸಿಕೊಂಡಾಗ ನನ್ನ ಮುಂದೆ ಐದು ಪ್ರಶ್ನೆಗಳನ್ನು ಮುಂದಿಟ್ಟಿದ್ದರು. ಆ ಹಿನ್ನೆಲೆ ನಾನು ಮಾಹಿತಿ ಪಡೆಯಲು ಭದ್ರಾವತಿಗೆ ಬಂದಿದ್ದೇನೆ ಎಂದು ಹೆಚ್?ಡಿ ಕುಮಾರಸ್ವಾಮಿ ಹೇಳಿದ್ದಾರೆ.



ಮುಂದಿನ ದಿನಗಳಲ್ಲಿ ಕಾರ್ಖಾನೆಯ ವಿಷಯದಲ್ಲಿ ಏನು ತೀರ್ಮಾನ ಆಗಬಹುದು, ಎಲ್ಲಾ ರೀತಿಯ ಸಾಧಕ-ಬಾಧಕಗಳು, ಕಾರ್ಮಿಕರ ಬದುಕು ಏನಿದೆ, ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಇರುವ ಕಾರ್ಖಾನೆಯನ್ನು ಉಳಿಸುವ ನಿಟ್ಟಿನಲ್ಲಿ ಏನ್ ಮಾಡಬಹುದು ಎಂಬುದರ ಬಗ್ಗೆ ಸದ್ಯದಲ್ಲಿಯೇ ತೀರ್ಮಾನ ತೆಗೆದುಕೊಳ್ಳಲಿದ್ದೇನೆ ಎಂದು ತಿಳಿಸಿದರು.

ಕಾರ್ಖಾನೆಯ ವಿಷಯವನ್ನು ಬಜೆಟ್‌ನಲ್ಲಿ ತರುವ ಅವಶ್ಯಕತೆ ಇಲ್ಲ. ಕಾರ್ಖಾನೆಯನ್ನು 1998 ರಲ್ಲಿ ಸೈಲ್?ಗೆ ಸೇರಿಸಲಾಗಿದೆ. ಪ್ರಧಾನ ಮಂತ್ರಿಗಳು ಆತ್ಮನಿರ್ಭರ ಭಾರತ, ಮೇಕ್ ಇನ್ ಇಂಡಿಯಾದಲ್ಲಿ ನಂಬಿಕೆಯನ್ನಿಟ್ಟುಕೊಂಡಿದ್ದಾರೆ. 2030ಕ್ಕೆ ನಮ್ಮ ದೇಶದಲ್ಲಿ 300 ಮಿಲಿಯನ್ ಟನ್ ಕಬ್ಬಿಣವನ್ನು ಉತ್ಪಾದನೆ ಮಾಡುವ ಗುರಿಯನ್ನಿಟ್ಟುಕೊಂಡಿದ್ದಾರೆ. ಈ ಗುರಿಯನ್ನು ತಲುಪಲು ಏನ್ ಕಾರ್ಯಕ್ರಮ ಮಾಡಬಹುದು ಎಂಬುದನ್ನು ಚಿಂತಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಖಾಯಂ ಕಾರ್ಮಿಕರು ನಷ್ಟದಲ್ಲಿರುವ ಕಾರ್ಖಾನೆ ಎಂಬ ಹಣೆಪಟ್ಟಿಯಿಂದ ಹೊರತನ್ನಿ ಎಂಬ ಬೇಡಿಕೆಯನ್ನಿಟ್ಟಿದ್ದಾರೆ. ಗುತ್ತಿಗೆ ಕಾರ್ಮಿಕರು ಕಾರ್ಖಾನೆಯನ್ನು ಉಳಿಸಿ ತಮಗೆ 20-26 ದಿನಗಳ ಕೆಲಸ ಸಿಗಬೇಕೆಂಬ ಬೇಡಿಕೆ ಇದೆ. ಹಾಲಿ ಲೋಕಸಭೆ ಅಧಿವೇಶನ ನಡೆಯುತ್ತಿರುವುದರಿಂದ ಕಾರ್ಖಾನೆ ಕುರಿತು ಯಾವುದೇ ಘೋಷಣೆಯನ್ನು ನಾನು ಇಲ್ಲಿ ಮಾಡಲು ಆಗುವುದಿಲ್ಲ, ಇದಕ್ಕೆ ಅನೇಕ ತೊಡಕುಗಳಿವೆ. ಕಾರ್ಖಾನೆಯ ಎಲ್ಲಾ ಅಂಶವನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಕಾರ್ಖಾನೆಯನ್ನು ಯಾವ ರೀತಿಯಲ್ಲಿ ಉಳಿಸಬೇಕೆಂಬುದನ್ನು ಚಿಂತನೆ ಮಾಡುತ್ತೇನೆ ಎಂದಿದ್ದಾರೆ.

ಭದ್ರಾವತಿಯಲ್ಲಿ ಪ್ರತಿಯೊಬ್ಬರದು ಒಂದೊಂದು ಬೇಡಿಕೆ ಇದೆ. ಇದರಿಂದ ಕಾರ್ಖಾನೆಯ ಆಸ್ತಿಯನ್ನು ಉಳಿಸಿಕೊಳ್ಳಬೇಕೆಂದು, ಕಾರ್ಮಿಕರ ಮುಂದಿನ ಜೀವನದ ಕುರಿತು ಸಹ ಒಂದು ತೀರ್ಮಾನ ಮಾಡುತ್ತಿದ್ದೇವೆ ಎಂದರು. ಕಾರ್ಖಾನೆ ಉಳಿಸುವ ನಿಟ್ಟಿನಲ್ಲಿ ರಮಣದುರ್ಗ ಗಣಿಗಾರಿಕೆ ಕುರಿತು ಮೊದಲ ಒಂದು ಪ್ರಯತ್ನ ಈಗ ಪ್ರಾರಂಭವಾಗಿದೆ.

ಇದಕ್ಕೆ ಉತ್ತರ ಮುಂದಿನ ದಿನಗಳಲ್ಲಿ ನಿಮಗೆ ಸಿಗಲಿದೆ ಎಂದು ಹೇಳಿದ್ದಾರೆ. ಸಿಎಂ ಬದಲಾವಣೆ ಹಾಗೂ ಹೆಚ್ಚುವರಿ ಡಿಸಿಎಂ ಸ್ಥಾನದ ಕುರಿತು, ಇದು ಕಾಂಗ್ರೆಸ್ ಪಕ್ಷದ ವಿಷಯ. ಅದು ಅವರೇ ಬಗೆಹರಿಸಿಕೊಳ್ಳಬೇಕು ಎಂದರು. ಚಲುವರಾಯಸ್ವಾಮಿ ಅವರು ಮಂಡ್ಯದಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಕುಮಾರಸ್ವಾಮಿ ಸಹಕರಿಸಲಿ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಅವರ ಬೇಡಿಕೆ ಏನಿದೆ ಎಂಬುದನ್ನು ಅವರು ನೀಡಲಿ, ಪರಿಶೀಲನೆ ಮಾಡಲಾಗುವುದು ಎಂದರು.

ಎಮ್ಮೆಹಟ್ಟಿ ಗ್ರಾಮಕ್ಕೆ; ಮೃತರ ಕುಟುಂಬಗಳಿಗೆ ಸಾಂತ್ವನ: ಮೂರು ದಿನದ ಹಿಂದೆ ಎಮ್ಮೆಹಟ್ಟಿ ಗ್ರಾಮಸ್ಥರು ಪ್ರವಾಸಕ್ಕೆ ಹೋಗಿ ವಾಪಸ್ ಆಗುವಾಗ ಅಪಘಾತದಲ್ಲಿ ಮೃತಪಟ್ಟಿದ್ದರು. ಇದರಿಂದ ಕುಮಾರಸ್ವಾಮಿ ಅವರು ಎಮ್ಮೆಹಟ್ಟಿ ಗ್ರಾಮಕ್ಕೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಎಮ್ಮೆಹಟ್ಟಿ ಗ್ರಾಮಕ್ಕೆ ಭೇಟಿ ನೀಡಿದ್ದೇನೆ. ಆ ಕುಟುಂಬದವರ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿದ್ದೇನೆ. ಆ ಕುಟುಂಬಗಳಿಗೆ ಸಹಾಯ ಮಾಡುವ ಕುರಿತು ತೀರ್ಮಾನ ಮಾಡಲಾಗುವುದು ಎಂದು ತಿಳಿಸಿದರು.

## ವೀರಪ್ಪ ಮೊಯ್ಲಿ ಪುತ್ರಿ ಹಂಸ ಮೊಯ್ಲಿ ವಿಧಿವಶ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಪುತ್ರಿ ವಿಧಿವಶರಾಗಿದ್ದಾರೆ. ಅನಾರೋಗ್ಯದಿಂದ ಬಳಲುತ್ತಿದ್ದ ವೀರಪ್ಪ ಮೊಯ್ಲಿ ಅವರ ಪುತ್ರಿ ಹಂಸ ಮೊಯ್ಲಿ ರಾತ್ರಿ



ಬೆಂಗಳೂರಿನಲ್ಲಿ ಮೃತಪಟ್ಟಿದ್ದಾರೆ. ಪುತ್ರಿ ಹಂಸ ಮೊಯ್ಲಿ ಸಾವಿನ ಸುದ್ದಿ ತಿಳಿದು ಛತ್ತೀಸ್‌ಘಡದಲ್ಲಿದ್ದ ವೀರಪ್ಪ ಮೊಯ್ಲಿ ರಾತ್ರಿಯೇ ವಾಪಾಸ್ ಆಗಿದ್ದಾರೆ. ಹಂಸ ಮೊಯ್ಲಿ ಅವರು ಭರತನಾಟ್ಯ ಕಲಾವಿದೆ ಆಗಿದ್ದರು. 46 ವರ್ಷದ ಹಂಸ ಮೊಯ್ಲಿ ಅವರು ಇತ್ತೀಚೆಗೆ ಅಸೌಖ್ಯದಿಂದ ಬಳಲುತ್ತಿದ್ದರು. ಭರತನಾಟ್ಯ ನೃತ್ಯಗಾರ್ತಿ ಮತ್ತು ಪ್ರಾಯೋಗಿಕ ನೃತ್ಯ ಸಂಯೋಜಕಿಯಾಗಿದ್ದರು. ದೇವದಾಸಿಯರ ಜೀವನವನ್ನು ಆಧರಿಸಿದ ತಮಿಳು ಸಿನಿಮಾ? ಶೃಂಗಾರಂ?ನಲ್ಲಿ ನಟಿಸಿದ್ದರು. ಅನಾರೋಗ್ಯದಿಂದಾಗಿ ಏಕಾಏಕಿ ಬಳಲಿದ್ದ ಅವರು, ನಿನ್ನೆ ಸಂಜೆ ಅಸ್ವಸ್ಥರಾಗಿದ್ದರು. ತಕ್ಷಣವೇ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ವೀರಪ್ಪಮೊಯ್ಲಿ ಅವರ ಮೂರನೇ ಪುತ್ರಿಯಾಗಿದ್ದ ಹಂಸ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ?ಜನಾನುರಾಗಿ? ಎಂಬ ಹೆಸರು ಪಡೆದಿದ್ದ ಅವರು, ತಮದೇ ಆದ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಭರತ ನಾಟ್ಯ ಕಲಾವಿದರಾಗಿದ್ದ ಹಂಸ ಮೊಯ್ಲಿ ಅವರು ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪ್ರದರ್ಶನ ನೀಡಿದ್ದರು. ಹಂಸ ಮೊಯ್ಲಿ ಭರತನಾಟ್ಯ ನೃತ್ಯಗಾರ್ತಿ ಮತ್ತು ಪ್ರಾಯೋಗಿಕ ನೃತ್ಯ ಸಂಯೋಜಕಿ. ಇತ್ತೀಚೆಗೆ ಮಕ್ಕಳಿಗಾಗಿ ಹಿಂದಿ ನಾಟಕ, ಕ್ಯುನ್ ಕ್ಯುನ್ ಲಡ್ಕಿ, ಅದೇ ಹೆಸರಿನ ಮಹಾಶ್ವೇತಾ ದೇವಿಯವರ ಪುಸ್ತಕದಿಂದ ಸ್ಫೂರ್ತಿ ಪಡೆದಿದ್ದಾರೆ ಮತ್ತು ರವೀಂದ್ರನಾಥ ಟ್ಯಾಗೋರ್ ಅವರು ಬರೆದ ಮಕ್ಕಳಿಗಾಗಿ ಇಂಗ್ಲಿಷ್ ನಾಟಕವನ್ನು ನೃತ್ಯ ಸಂಯೋಜನೆ ಮಾಡಿದ್ದಾರೆ. ಅವರು ತಮ್ಮನ್ನು ಅನ್ವೇಷಕಿ ಮತ್ತು ಯೋಗದ ಅಭ್ಯಾಸಿ ಎಂದು ವಿವರಿಸಿದ್ದರು.

## ದಲಿತರಿಗೂ ಸಿಎಂ ಸ್ಥಾನ ನೀಡಿ



ಮಂಡ್ಯ : ರಾಜ್ಯ ರಾಜಕಾರಣದಲ್ಲಿ ಭುಗಿಲೆದ್ದಿರುವ ಒಕ್ಕಲಿಗ ಹಾಗೂ ವೀರಶೈವ ಲಿಂಗಾಯತ ಸಮುದಾಯದ ನಾಯಕರಿಗೆ ಸಿಎಂ ಮಾಡಬೇಕು ಎಂಬ ಕೂಗಿನ ಗದ್ದಲದ ನಡುವೇ ಇದೀಗ ದಲಿತರಿಗೆ ಸಿಎಂ ಮಾಡಿ ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ಆಗ್ರಹಿಸಿದ್ದಾರೆ.

ಸಿಎಂ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯೆ ನೀಡಿರುವ ಅವರು, ದಲಿತ ನಾಯಕರಿಗೂ ಮುಖ್ಯಮಂತ್ರಿ ಆಗಲು ಒಂದು ಅವಕಾಶ ನೀಡಬೇಕು ಎಂದಿದ್ದಾರೆ. ನಮಗೆ ಮಠಾಧಿಪತಿ..ಇತ್ಯಾದಿ ಯಾವುದೂ ಇಲ್ಲ. ನಮಗೇನಿದ್ದರೂ ಬಾಬಾ ಸಾಹೇಬರು ನೀಡಿರುವ ಸಂವಿಧಾನವೇ ಸುಪ್ರೀಂ ಎಂದು ಹೇಳಿದ್ದಾರೆ. ಸಂವಿಧಾನದಡಿ ಸಿಎಂ ಸ್ಥಾನ ಕೇಳಲು ನಮಗೂ ಹಕ್ಕಿದೆ. ಮಲ್ಲಿಕಾರ್ಜುನ ಖರ್ಗೆ ಅವರಂತಹ ಅನೇಕ ನಾಯಕರು ಸಿಎಂ ಆಗಲು ಯೋಗ್ಯರಿದ್ದು, ಹಲವರು ಅನೇಕ ಬಾರಿ ನಾಯಕತ್ವ ವಹಿಸಿದ ಅನುಭವಸ್ಥರಿದ್ದಾರೆ. ಸಿಎಂ ವಿಚಾರ ಬೀದಿಯಲ್ಲಿ ಮಾತನಾಡುವ ವಿಚಾರವಲ್ಲ. ಪ್ರಜಾಪ್ರಭುತ್ವದಲ್ಲಿ ಇದು ಆಂತಕರಿಕವಾಗಿ ಚರ್ಚಿಸುವಂತಹದ್ದು ಎಂದು ತಿಳಿಸಿದ್ದಾರೆ.

# ಶ್ರೀ ಗಾಣಸಿರಿ ನೂತನ ವೃತ್ತ ಉದ್ಘಾಟನೆ



ಮುಂಜಾನೆ ವಾರ್ತೆ ಸುದ್ದಿ ತಾಳಿಕೋಟಿ: ಪಟ್ಟಣದ ಗಾಣಗೇರ ಸಮಾಜದ ಕುಲ ದೇವತೆಯಾದ ಶ್ರೀ ಗಾಣಸಿರಿ ಅವರ ನೂತನ ವೃತ್ತವನ್ನು ಶನಿವಾರ ಉದ್ಘಾಟಿಸಲಾಯಿತು. ಪಟ್ಟಣದ ರಾಜ್ಯ ಹೆದ್ದಾರಿ ಪಕ್ಕದ 6ನೇ ವಾರ್ಡಿನ ವ್ಯಾಪ್ತಿಗೆ ಬರುವ ಸಂಗಮ್ ಲಾಡ್ಜ ಹತ್ತಿರ ಶ್ರೀ ಗಾಣಸಿರಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸರ್ವ ಸಮಾಜದ ಬಾಂಧವರನ್ನು ಸೇರಿಸಿಕೊಂಡು ನೂತನ ವೃತ್ತವನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸಮಾಜದ ಮುಖಂಡ ಕಾಶಿನಾಥ ಸಜ್ಜನ ಅವರು ಮಾತನಾಡಿ ವೀರಶೈವ ಲಿಂಗಾಯತ ಸಮಾಜದ ಭಾಗವಾಗಿರುವ ಗಾಣಗೇರ ಸಮಾಜದ ಕುಲ ದೇವತೆಯಾದ ಶ್ರೀ ಗಾಣಸಿರಿ ಅವರ ಹೆಸರಿನಲ್ಲಿ ಉದ್ಘಾಟನೆ ಗೊಳ್ಳುತ್ತಿರುವ ವೃತ್ತದ ಈ ಕಾರ್ಯಕ್ರಮದಲ್ಲಿ ಪಟ್ಟಣದ ಎಲ್ಲ ಸಮಾಜದ ಬಾಂಧವರು ಭಾಗವಹಿಸಿರುವುದು ಸಂತೋಷದ ವಿಷಯವಾಗಿದೆ. ಈ ಸರ್ಕಲ್ ಪಟ್ಟಣದ ಭಾವೈಕ್ಯತೆಯ ಪ್ರತೀಕವಾಗಲಿದೆ ಸಹಕರಿಸಿದ ತಮಗೆಲ್ಲರಿಗೂ ಸಮಾಜ ಋಣಿಯಾಗಿದೆ ಎಂದರು. ಈ ಸಮಯದಲ್ಲಿ ಗಾಣಗೇರ ಸಮಾಜದ ಅಧ್ಯಕ್ಷ ಪ್ರಕಾಶ ಸಜ್ಜನ. ಉಪಾಧ್ಯಕ್ಷ ತಿಪ್ಪಣ್ಣ ಸಜ್ಜನ. ಪರಪ್ಪ ಸಜ್ಜನ ಗುರಲಿಂಗಪ್ಪ ಸಜ್ಜನ.

ವಾರ್ಡ್ ಸದಸ್ಯ ಮುತ್ತಪ್ಪ ಚಮಲಾಪೂರ. ಗಣ್ಯರಾದ ಪ್ರಭುಗೌಡ ಮದರಕಲ್.ಆರ್.ಎಲ್.ಕೊಪ್ಪದ. ವಿಜಯಸಿಂಗ್ ಹಜೇರಿ.ಜಿ.ಜಿ.ಮದರಕಲ್ಲ. ಪ್ರಕಾಶ ಹಜೇರಿ.ಅಶೋಕ ಸಜ್ಜನ(ಬಿದರಕುಂದಿ) ಇಬ್ರಾಹಿಂ ಮನ್ಸೂರ.ಮಾನಸಿಂಗ ಕೊಕಟನೂರ. ಪರಶುರಾಮ ತಂಗಡಗಿ. ಮುದುಕಪ್ಪ ಬಡಿಗೇರ.ಶಿವಶಂಕರ ಹಿರೇಮಠ.ನ್ಯಾಯವಾದಿ ಗಂಗಾಧರ ಕಸ್ತೂರಿ. ಮಹಾಂತೇಶ ಮುರಾಳ.ರಾಜು ಸಜ್ಜನ. ದಸ್ತಗೀರ ಕೆಂಭಾವಿ. ಪ್ರಭು ಬಿಳೆಭಾವಿ.ರವಿ ಕಲಾಲ. ರಘುರಾಮಸಿಂಗ್ ಹಜೇರಿ.ರತನಸಿಂಗ ಕೊಕಟನೂರ. ಅಶೋಕ ಹೊಸಮನಿ. ದತ್ತು ಉಬಾಳೆ. ಶರಣು ಸಜ್ಜನ ಮತ್ತೀತರರು ಇದ್ದರು.

ವರದಿ: ಸುನೀಲ್ ಎಲ್ ತಳವಾರ
ಮುಂಜಾನೆ ವಾರ್ತೆ ತಾಳಿಕೋಟಿ

## ಸರಸ್ವತಿ ಪೂಜೆಯೊಂದಿಗೆ ತೆರೆಸಾ ಸ್ಕೂಲ್‌ನಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ



ಕೊರಟಗೆರೆ :- ಭಾರತೀಯ ಹಿಂದೂ ಸಂಸ್ಕೃತಿಯಲ್ಲಿ ಮಕ್ಕಳು ಪ್ರಥಮವಾಗಿ ವಿದ್ಯೆಯನ್ನು ಆರಂಬಿಸುವಾಗ ವಿದ್ಯಾದೇವತೆ ಸರಸ್ವತಿದೇವಿಯ ಆಶೀರ್ವಾದದೊಂದಿಗೆ ಅಕ್ಷರಾಭ್ಯಾಸ ಮಾಡಿಸುವ ಮೂಲಕ ಪಟ್ಟಣದ ತೆರೆಸಾ ಸ್ಕೂಲ್‌ನಲ್ಲಿ ಮಕ್ಕಳ ಜ್ಞಾನಾರ್ಜನೆಗೆ ಸಜ್ಜುಗೊಳಿಸಲಾಗುತ್ತಿದೆ ಎಂದು ಶಾಲೆಯ ಆಡಳಿತ ಮಂಡಲಿ ಖಜಾಂಚಿ ಮುಜಾಹಿದ್ ನವಾಜ್ ತಿಳಿಸಿದರು. ಅವರು ಕೊರಟಗೆರೆ ಪಟ್ಟಣದ ತೆರೆಸಾ ಸ್ಕೂಲ್‌ನಲ್ಲಿ ಆಡಳಿತ ಮಂಡಲಿ ಏರ್ಪಡಿಸಿದ್ದ 2024-25 ನೇ ಸಾಲಿನಲ್ಲಿ ದಾಖಲಾದ ಮಕ್ಕಳಿಗೆ ಪ್ರಥಮ ಅಕ್ಷರಾಬ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ ಪುಟ್ಟ ಮಗು ಜಗ್ತತ್ತಿಗೆ ಬಂದು ಕಣ್ಣುಬಿಟ್ಟ ಕ್ಷಣದಿಂದಲೇ ಅದರ ಕಲಿಕೆ ಪ್ರಾರಂಭವಾಗುತ್ತದೆ, ಕಣ್ಣಾಡಿಸುವುದು, ನುಗುವುದು, ಕೂರುವುದು, ನಿಲ್ಲುವುದು, ಚಪ್ಪಾಳೆ ತಟ್ಟುವುದು, ಮಾತು ಎಲ್ಲವೂ ಮಗುವಿಗೆ ಕಲಿಕೆಯೇ ಅಗಿರುತ್ತದೆ ಇದರೊಂದಿಗೆ ಜ್ಞಾನಾರ್ಜನೆಗೆ ಸಜ್ಜಾಗುವಾಗ ಅಕ್ಷರ ಕಲಿಸುವ ಸಂದರ್ಭದಲ್ಲಿ ವಿದ್ಯಾಧಿ ದೇವತೆ ಸರಸ್ವತಿಯ ಆಶೀರ್ವಾದ ಪಡದೇ ಮುಂದುವರಿಸಬೇಕೆಂಬ ಹಿಂದೂ ಸಂಸ್ಕೃತಿಯ ಪದ್ದತಿಯಂತೆ ಅರ್ಚಕ ವೆಂಕಟೇಶ ಶಾಸ್ತ್ರಿಗಳ ನೇತೃತ್ವದಲ್ಲಿ ಶಾಲಾ ಆವರಣದಲ್ಲಿ ವಿಶೇಷಪೂಜಾ ಕಾರ್ಯಕ್ರಮದೊಂದಿಗೆ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲಾಗಿದೆ ಎಂದರು. ಸಂಸ್ಥೆಯ ಕಾರ್ಯದರ್ಶಿ ಹಾಗೂ ಮುಖ್ಯಶಿಕ್ಷಕಿ ಅಸ್ಮಾಬೀ ಮಾತನಾಡಿ ಬಾಲ್ಯದಲ್ಲಿ ಮಕ್ಕಳಿಗೆ ಯಾವ ರೀತಿಯಲ್ಲಿ ನಾವು ವಿದ್ಯೆ ಕಲಿಸುತ್ತೇವೆ ಎಂಬುದು ಪ್ರಮುಖ ಪಾತ್ರ ವಹಿಸುತ್ತದೆ, ಆದ್ದರಿಂದ ಕೇವಲ ಅಕ್ಷರ ಎಂಬುದು ಅಕ್ಷರ ಅಲ್ಲ ಅದು ಬದಲಾಗಿ ಮನುಷ್ಯನ ಸರ್ವಾಂಗೀಣ ಸರ್ವತೋಮುಖ ಅಭಿವೃದ್ಧಿಗೆ ನಾಂದಿ ಹಾಡುತ್ತದೆ, ಅದ್ದರಿಂದ ಬಾಲ್ಯದಲ್ಲಿ ಮಗುವಿಗೆ ಅಕ್ಷರ ಅಭ್ಯಾಸ ಎಂಬ ಕಾರ್ಯಕ್ರಮ ನಮ್ಮ ಶಾಲೆಯಲ್ಲಿ ಪ್ರತಿ ವರ್ಷವೂ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಅರ್ಚಕ ವೆಂಕಟೇಶ ಶಾಸ್ತಿ ಶಾಲಾ ಆವರಣದಲ್ಲಿ ಗಣಪತಿ ಹೋಮದೊಂದಿಗೆ ಗಣೇಶನ ನಮನ, ಸರಸ್ವತಿ ನಮನ, ಗುರು ನಮನ ಹೀಗೆ ಮೂರು ಹಂತದಲ್ಲಿ ವಿಶೇಷ ಪೂಜೆ ನಂತರ ಓಂ ನಮಾ ಶಿವಾಯ ಎಂದು ತಂದೆ-ತಾಯಿ ತಮ್ಮ ಮಕ್ಕಳ ಕೈಯಿಂದ ಅಕ್ಷರಗಳನ್ನು ಬರೆಸುವ ಮೂಲಕ ಕಲಿಕೆಗೆ ಮುನ್ನುಡಿ ಬರೆಸಿ ನಂತರ ಮಾತನಾಡಿ ಮಕ್ಕಳಿಗೆ ಅಕ್ಷರ ಅಭ್ಯಾಸ ಮಾಡಿಸುವುದು ಸರ್ವ ಶ್ರೇಷ್ಠವಾದ ಮಾಸ ಇದಾಗಿದೆ ಈ ಮಾಸದಲ್ಲಿ ಮಕ್ಕಳು ಅಕ್ಷರಾಬ್ಯಾಸ ಮಾಡುವ ಮೂಲಕ ಉತ್ತಮ ಕಲಿಕೆಯಲ್ಲಿ ತೊಡುಗುವ ದೃಡ ವಿಶ್ವಾಸವಿದೆ ಎಂದರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕಿಯರಾದ ಮಾಲಾ ಸುಧಾ, ರಮ್ಯ, ಅನುರಾಧ ಸೇರಿದಂತೆ ಮಕ್ಕಳೊಂದಿಗೆ ಪೋಷಕರು ಉಪಸ್ಥಿತರಿದ್ದರು.

## ಶ್ರೀ ಮುತ್ತ ರಾಯ ಸ್ವಾಮಿ ಮತ್ತು ಭೂತರಾಯಸ್ವಾಮಿ ದೇವಾಲಯದ ಪುನರ್ಜೀರ್ಣೋದ್ಧಾರ



ಮಧುಗಿರಿ;-ತಾಲೂಕಿನ ಪುರವರ ಹೋಬಳಿ ಕೊಂಡವಾಡಿ ಗ್ರಾಮ ಪಂಚಾಯಿತಿ ನವಿಲಡಕು ಗ್ರಾಮದಲ್ಲಿ ನೆಲೆಸಿರುವ ಶ್ರೀ ಮುತ್ತುರಾಯಸ್ವಾಮಿ ಮತ್ತು ಭೂತರಾಯ ಸ್ವಾಮಿ ದೇವಾಲಯದ ದೇವರ ಪುನಃ ಜೀರ್ಣೋದ್ಧಾರ ಕಾರ್ಯಕ್ರಮವನ್ನು ಅದ್ದೂರಿಯಾಗಿ ವಿಜೃಂಭಣೆಯಿಂದ ನೆರವೇರಿಸಲಾಯಿತು.

ದೇವರಿಗೆ ವಿಶೇಷ ಹೂವಿನ ಅಲಂಕಾರ ಪೂರ್ಣಕುಂಭ ಕಳಸ ಹೋಮ ಹವನ ಪೂಜಾ ವಿಧಿ ವಿಧಾನಗಳೊಂದಿಗೆ ನೆರವೇರಿಸಲಾಯಿತು. ಇದೇ ಸಂದರ್ಭದಲ್ಲಿ ದೇವಸ್ಥಾನದ ಮಂಡಳಿ ಹಾಗೂ ಗ್ರಾಮಸ್ಥರಿಂದ ಉಚಿತ ಸಾಮೂಹಿಕ ವಿವಾಹ ಮಾಡಲಾಯಿತು.

ದೇವರ ಪೂಜಾ ಕಾರ್ಯಕ್ರಮದಲ್ಲಿ ನವಿಲಡಕು ಗ್ರಾಮಸ್ಥರು ಸುತ್ತಮುತ್ತಲಿನ ಗ್ರಾಮದವರು ಆಗಮಿಸಿ ದೇವರಿಗೆ ಪೂಜೆ ಸಲ್ಲಿಸಿ ದೇವರ ದರ್ಶನವನ್ನು ಪಡೆದರು.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಸೋಮವಾರ 01 ಜುಲೈ 2024
MONDAY 01 July 2024

# ನಿವೃತ್ತ ಉಪ ವಲಯ ಅರಣ್ಯಾಧಿಕಾರಿ ಅಣ್ಣಪ್ಪ ಅವರಿಗೆ ಬೀಳ್ಕೊಡುಗೆ ಸಮಾರಂಭ

ಸಾಗರದಲ್ಲಿ ಸುದೀರ್ಘ 43 ವರ್ಷಗಳ ಕಾಲ ತನ್ನ ಸೇವೆಯನ್ನು ಅರಣ್ಯ ಇಲಾಖೆಯಲ್ಲಿ ಕಳೆದ ಅಣ್ಣಪ್ಪ ಅವರಿಗೆ ಅರಣ್ಯ ಇಲಾಖೆಯ ವತಿಯಿಂದ ಬೀಳ್ಕೊಡುಗೆ ಮಾಡಲಾಯಿತು.

ಈ ಸಂದರ್ಭದಲ್ಲಿ ಂಅಈ ಮೋಹನ್ ಮಾತನಾಡಿ ಸರ್ಕಾರದ ಎಲ್ಲಾ ವಿಭಾಗದಲ್ಲಿಯು ವಯೋ ನಿವೃತ್ತಿ ಸಹಜ ಆದರೆ ಎಷ್ಟು ವರ್ಷಗಳ ಕಾಲ ಸೇವೆ ಮಾಡಿದಿವಿ ಅನ್ನುಸಕ್ಕಿಂತ ನಮ್ಮ ಸೇವೆಯನ್ನು ಜನರು ಗುರುತಿಸಲ್ಪಡುವ ರೀತಿ ಆಗಬೇಕು ಎಂದರು ಅವರ ಮೂಲ.ಸ್ಥಾನದಲ್ಲಿ ಕೆಲಸ ನಂತರ ಹಲಾವರು ಕಡೆಗಳಲ್ಲಿ ಕೆಲಸ ಮಾಡುವ ಅವಕಾಶ ನಂತರ ಮೂಲ ಸ್ಥಾನದಲ್ಲಿ ನಿವೃತ್ತಿ



ಇವರಿಗೆ ಲಭಿಸಿದೆ.ನಮ್ಮ ಇಲಾಖೆಯಲ್ಲಿಯ ಎಲ್ಲಾ ಒತ್ತಡವನ್ನು ಸರಿಯಾಗಿ ನಿಭಾಯಿಸಿದರು .ಅಣ್ಣಪ್ಪ ಅವರ ಕೆಲಸ ನಮ್ಮ ಕಣ್ಣ ಮುಂದೆಯೇ ಇದೆ ಅವರು ಮಾಡಿದ ಕೆಲಸಗಳು ಪಟ್ಟಿ ಮಾಡ್ತಾ ಹೋದರು ಅದು ಮುಗಿದ ಕೆಲಸ ಅವರ ಕೆಲಸದಲ್ಲಿನ ನಿಷ್ಠೆ. ಶ್ರದ್ಧೆ.ಪ್ರಮಾಣಿಕ ಕೆಲಸವು ನಮ್ಮ ಹಾಗೂ ಮುಂದಿನ ಯುವ ಕೆಲಸಗಾರಿಗೆ ಮಾದರಿಯಾಗಿದೆ ಎಂದರು..

ಖಈಔ ಅರವಿಂದ ಅವರು ಮಾತಾನಾಡುತ್ತಾ ಅಣ್ಣಪ್ಪ ನೇರ ನುಡಿಯ ಕೆಲಸಗಾರರು ಅವರಿಗೆ ಕೆಲಸದ ಸಮಯಕ್ಕೆ ಸಾಟಿಯಾಗಿ ಯಾರು ಇಲ್ಲ ಎಂದು ಅವರನ್ನು ಹೋಗಳಿದರು.

ಸಮಯ ಪಾಲನೆ ನಮ್ಮ ಕೆಲಸದಲ್ಲಿ ಬಹಳ ಮುಖ್ಯ ಅವರು ಅದನ್ನು ಮೈಗೂಡಿಸಿ ಕೊಂಡಿದ್ದರು.ಅವರಿಗೆ ಪರಿಸರದ ಮೇಲೆ ಇರುವ ಕಾಳಜಿಯಿಂದ ಅನೇಕ ಕಡೆಗಳಲ್ಲಿ ಅವರು ಗಿಡಗಳನ್ನು ನೆಟ್ಟು ಅದನ್ನು ಕಾಪಾಡಿಕೊಂಡು ಬಂದಿದ್ದರು ಇಂದು ಆ ಮರಗಳು ಹಣ್ಣು ನೀಡುತ್ತಾ ಬಂದಿದೆ ಅಂದರೆ ಅವರ ಕೆಲಸ ಅಲ್ಲಿ ಕಾಣುತ್ತದೆ ಇವರು ಇಲಾಖೆಯಲ್ಲಿ ಶಿಸ್ತಿನ ಅಧಿಕಾರಿಯಾಗಿದ್ದರು ಎಂದರು. ಅಣ್ಣಪ್ಪ ಅವರಿಗೆ ಅವರ ಸಹಪಾಠಿಗಳು ತಮ್ಮ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು ಅವರು ಮಾಡಿದ ಸಾಧನೆ .ಅವರ ನೇರ ಮಾತುಗಳು .ಹೊಸದಾಗಿ ಸೇರ್ಪಡೆಯಾದ ಕೆಲಸಗಾಗರೊಂದಿಗೆ ಅವರು ತೋರಿಸುವ ಕಾಳಜಿ ಮತ್ತೆ ಕೆಲಸ ಹೇಳಿಕೊಡುವ ರೀತಿಯನ್ನು ಸ್ಮರಿಸಲಾಯಿತು.. ನಂತರ ಅಣ್ಣಪ್ಪ ದಂಪತಿಗಳಿಗೆ ಇಲಾಖೆಯ ವತಿಯಿಂದ ಸನ್ಮಾನ ಮಾಡಲಾಯಿತು..

ವೇದಿಕೆಯಲ್ಲಿ ಂಅಈ ಮೋಹನ್ ಕುಮಾರ್.ಖಈಔ ಅರವಿಂದ .ಅಂಬ್ಲಿಗೂಳ ಖಈಔ ಮೋಹನ್ ದೂಡ್ಡ ಬಡಗಿ.

ಸ್ವಾಗತವನ್ನು ಕಿರಣ್ ಎಸ್.ಪಿ.ಮಾಡಿದರೆ ನಿರೂಪಣೆ ಯನ್ನು ಸುರೇಶ್ .ಪ್ರಾರ್ಥನೆಯನ್ನು. ಶ್ರೀಮತಿ ಅಮಿತ್ .ವಂದನಾರ್ಪಣೆಯನ್ನು ಶ್ರೀಮತಿ ಸಚೇತ್ ಮಾಡಿದರು...

ವರದಿ: ರಾಘವೇಂದ್ರ ತಾಳಗುಪ್ಪ

# ರಾಹುಲ್ ಗಾಂಧಿ ವಿಚಾರ ಮಂಚ್ ಸಂಘಟನೆಯ ರಾಜ್ಯಾಧ್ಯಕ್ಷರಾಗಿ ಎಂ.ರಾಜಶೇಖರ್ ಆಯ್ಕೆ



ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಕೊಮಾರನಪುರ ಗ್ರಾಮದ ಎಂ ರಾಜಶೇಖರ್ ರವರನ್ನು ರಾಹುಲ್ ಗಾಂಧಿ ವಿಚಾರ ಮಂಚ್ ಸಂಘಟನೆಯ ಕರ್ನಾಟಕ ರಾಜ್ಯದ ನೂತನ ರಾಜ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ರಾಷ್ಟ್ರೀಯ ಅಧ್ಯಕ್ಷರಾದ ವಿಕಾಸವಶಿಷ್ಟ ರವರು ಆದೇಶ ಹೊರಡಿಸಿದ್ದಾರೆ

ವರದಿ: ಆರ್.ಉಮೇಶ್ ಮಲಾರಪಾಳ್ಯ

# ಪೃಥ್ವಿ ಜ್ಞಾನ ವಿಕಾಸ ಕೇಂದ್ರಾದಲ್ಲಿ ಕೇಂದ್ರದ ವಾರ್ಷಿಕೋತ್ಸವ




ಸಾಗರ ತಾಲೂಕಿನ ಹೊಸಂತೆ ಗ್ರಾಮದಲ್ಲಿ ಕಾರ್ಯಕ್ಷೇತ್ರದ ಪೃಥ್ವಿ ಜ್ಞಾನ ವಿಕಾಸ ಕೇಂದ್ರಾದಲ್ಲಿ ಕೇಂದ್ರದ ವಾರ್ಷಿಕೋತ್ಸವ ಹಮ್ಮಿಕೊಂಡಿದ್ದು ಪಂಚಾಯಿತಿ ಅಧ್ಯಕ್ಷರು ದೀಪ ಬೆಳಗುವ ಮೂಲಕ ಪ್ರರಾಬಿಸಿ ಹಿತ ನುಡಿಯನ್ನಾಡಿದರು . ಇನ್ನು ವಲಯದ ಮೇಲ್ವಿಚಾರಕರು ಯೋಜನೆಯ ಕಾರ್ಯಕ್ರಮ ಗಳ ಬಗ್ಗೆ ವಿವರಣೆ ನೀಡಿದರು, ಮತ್ತು ಹೊಲಿಗೆ ತರಬೇತಿ ನೀಡಿದಂತಹ ಸಾವಿತ್ರಿ ಮೇಡಂ ಅವರಿಗೆ ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಮತ್ತು ಒಕ್ಕೂಟ ಪದಾಧಿಕಾರಿಗಳು ಗುರುತಿಸುವ ಮೂಲಕ ಸನ್ಮಾನಿಸಿ ಕಿರುಕಾಣಿಕೆ ನೀಡಿದರು .ಆಟೋಟ ಸ್ಪರ್ಧೆ ಮತ್ತು ಬಹುಮಾನ ವಿತರಣೆ ಮಾಡಲಾಯಿತು.... ಈ ಕಾರ್ಯಕ್ರಮದಲ್ಲಿ ಸದಸ್ಯರೆಲ್ಲರೂ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

# ಬದುಕಿಗೆ ಕಣ್ಣುಗಳು ಅವಶ್ಯಕ ಡಾ.ಗಿರೀಶ್‌ರೆಡ್ಡಿ

ಕೊರಟಗೆರೆ:– ಬದುಕಿಗೆ ಕಣ್ಣುಗಳು ಅವಶ್ಯಕವಾಗಿದ್ದು, ಅವುಗಳನ್ನು ಕಾಲ ಕಾಲಕ್ಕೆ ಕಣ್ಣುಗಳ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ತುಮಕೂರಿನ ಅಗರ್ವಾಲ್ ಕಣ್ಣಿನ ಆಸ್ಪತ್ರೆಯ ಡಾ.ಗಿರೀಶ್‌ರೆಡ್ಡಿ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕ, ಐಕ್ಯೂ ಎಸಿ ಘಟಕದ ಸಹಯೋಗದೊಂದಿಗೆ ಹಾಗೂ ಅಗರ್ವಾಲ್ ಕಣ್ಣಿನ ಆಸ್ಪತ್ರೆ ತುಮಕೂರು ಇವರ ಸಂಯುಕ್ತಾಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ,

ಅತಿ ಹೆಚ್ಚು ಮೊಬೈಲ್ ಬಳಸುವುದರಿಂದ ಅವರ ಕಣ್ಣಿನ ದೃಷ್ಟಿ ನಿಧಾನವಾಗಿ ಕಡಿಮೆಯಾಗುತ್ತದೆ. ಆದುದರಿಂದ ಪ್ರತಿಯೊಬ್ಬರು ಕಣ್ಣಿನ ತಪಾಸಣೆಯನ್ನು ಮಾಡಿಸಿ ಎಂದು ವಿದ್ಯಾರ್ಥಿಗಳಿಗೆ ಸಲಹೆಯನ್ನು ನೀಡಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರಾಶುಪಾಲ ಡಾ.ಈರಪ್ಪನಾಯ್ಕ ಮಾತನಾಡಿ, ಕಣ್ಣಿನ ಅಶ್ಯಕತೆ ಪ್ರತಿಯೊಬ್ಬರಿಗೂ ಇದೆ, ವಿದ್ಯಾರ್ಥಿಗಳು ಮೊಬೈಲ್ ಗೀಳಿನಿಂದ ಹೊರಬಂದು ಪುಸ್ತಕ ಓದುವ ಹವ್ಯಾಸ ಹೆಚ್ಚಾಗಿ ಬಳಸಿಕೊಳ್ಳಬೇಕು. ಇಲ್ಲವಾದರೆ ಅತಿಕಿರಿ ವಯಸ್ಸಿಗೆ ತಮ್ಮ ದೃಷ್ಟಿಕೋನದ ಸಮಸ್ಯೆಯನ್ನು ಎದುರಿಸಬೇಕಾಗುವುದು,

ಐಕ್ಯೂಎಸಿ ಸಂಚಾಲಕಿ ಡಾ.ದೀಪಾ ಮಾತನಾಡಿ, ಜೀವನದ ಎಲ್ಲ ಚಟುವಟಿಕೆಗಳಿಗೆ ಮೂಲ ಕಣ್ಣು. ಆ ಕಣ್ಣಿನ ಬಗ್ಗೆ ಕಾಳಜಿ ವಹಿಸುವುದು ಬಹುಮುಖ್ಯವಾಗಿದೆ. ಹೊರ ಜಗತ್ತನ್ನು ನೋಡಿ ಆನಂದಿಸಬೇಕಾದರೆ ಕಣ್ಣನ್ನು ಜೋಪಾನವಾಗಿ ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ 350ಕ್ಕೂ ಹೆಚ್ಚು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕಣ್ಣಿನ ತಪಾಸಣೆಯನ್ನು ಮಾಡಿಸಿಕೊಂಡಿದ್ದು, ಕಣ್ಣಿನ ಸಮಸ್ಯೆ ಉಳ್ಳವರಿಗೆ ವೈದ್ಯರು ಸಲಹೆಯನ್ನು ನೀಡಿದರು. ಇದೇ ಸಂದರ್ಭದಲ್ಲಿ ಉಪನ್ಯಾಸಕರಾದ ನಟರಾಜು, ಅಗರ್ವಾಲ್ ಕಣ್ಣಿನ ಆಸ್ಪತ್ರೆಯ ಸಿಬ್ಬಂದಿಗಳು ಇತರರು ಇದ್ದರು.

# ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ಪ್ರತಿಬಾ ಪುರಸ್ಕಾರ



ಕೊರಟಗೆರೆ:–ನಾಡಪ್ರಭು ಕೆಂಪೇಗೌಡರ ದೂರದೃಷ್ಟಿ, ಪರಿಶ್ರಮ, ಜಾತ್ಯಾತೀತ ಭಾವನೆ, ತಂತ್ರಜ್ಞಾನ ವಿಶ್ವಕ್ಕೆ ಮಾದರಿಯಾಗಿದೆ ಎಂದು ತಹಶೀಲ್ದಾರ್ ಮಂಜುನಾಥ್ ತಿಳಿಸಿದರು.

ಅವರು ಪಟ್ಟಣದ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ನಾಡಪ್ರಭು ಕೆಂಪೇಗೌಡರ 515 ಜಯಂತಿಯ ಅದ್ಯಕ್ಷತೆ ವಹಿಸಿ ಮಾತನಾಡಿ ಒಂದು ಬರ ಪ್ರದೇಶವನ್ನು ಹೇಗೆ ಅಭಿವೃಧಿಪಡಿಸಬಹುದು ಎಂದು ಕೆಂಪೆಗೌಡರರು ತೋರಿಸಿಕೊಟ್ಟಿದ್ದಾರೆ, ಬೆಂದಕಾಳೂರು ಆಗಿದ್ದ ಬೆಂಗಳೂರನ್ನು ಈ ವಿಶ್ವಮಟ್ಟದ ಜಾಗತಿಕ ನಗರ ಮಾಡಿರುವುದು ಒಂದು ಅದ್ಬುತವಾದ ಕಾರ್ಯವಾಗಿದೆ, ಬೆಂಗಳೂರು ನಗರ ನಿರ್ಮಾಣ ಮಾಡುವಾಗ ಸುಮಾರು 3500 ಕೆರಗಳನ್ನು , 250 ದೇವಾಲಯಗಳನ್ನು ಕಟ್ಟಿದ್ದಾರೆ, ಎಲ್ಲಾ ಜನಾಂಗದ ಕುಲ ಕಸಬುಗಳನ್ನು ಆಧಾರಸಿ ಅವುಗಳನ್ನು ಮುನ್ನೆಲೆಗೆ ತರಲು ಕಸುಬಿನ ಆಧಾರದ ಮೇಲೆ ಸಣ್ಣ ಪ್ರಾಂತ್ಯಗಳನ್ನು ಮಾಡಿದರು ಅವರ ಆ ದೂರದೃಷ್ಟಿಯ ಪರಿಣಾಮ ಇಂದು ಬೆಂಗಳೂರು ಸುಮಾರು 2 ಕೋಟಿ ಜನಕ್ಕೆ ಆಶ್ರಯ ನೀಡಿದೆ, ದೇಶ ವಿದೇಶಗಳ ಜನರು ನೆಲಸಿದ್ದಾರೆ, ಕರ್ನಾಟಕ ರಾಜ್ಯಕ್ಕೆ ಅರ್ದದಷ್ಟು ಆದಾಯ ಬೆಂಗಳೂರು ನಗರ ಒಂದೇ ನೀಡುತ್ತಿದೆ ಇದರಿಂದ ರಾಜ್ಯದ ಹಲವು ಆಭಿವೃಧಿ ಕೆಲಸಗಳಿಗೆ ಕೊಡುಗೆ ನೀಡಿದೆ ಇದಕ್ಕೆ ಕಾರಣ ಕೆಂಪೇಗೌಡರು, ಇಂತಹ ಮಹನೀಯರು ಜಯಂತಿಯನ್ನು ವಿಶೇಷತೆಯನ್ನು ಚರಿತ್ರೆಯನ್ನು ಶಾಲಾ ಮಕ್ಕಳಿಗೆ ತಿಳಿಸಲು ಸರ್ಕಾರ ಅವರಗಳ ಹೆಸರಿನಲ್ಲಿ ಪ್ರಭಂಧ, ಚಿತ್ರಕಲೆ, ಭಾಷಣ, ಚರ್ಚಾಸ್ಪರ್ಧೆಗಳನ್ನು ಏರ್ಪಡಿಸಿದ್ದು ಸ್ಪರ್ಧೆಯು ಪ್ರಾರ್ಥಮಿಕ, ಹಿರಿಯ ಪ್ರಾರ್ಥಮಿಕ, ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು, ಪ್ರಥಮ ದರ್ಜೆ ಕಾಲೇಜು ಹಂತಗಳಲ್ಲಿ ನಡೆಸಲಾಗಿದ್ದು ವಿಜೇತ 36ವಿದ್ಯಾರ್ಥಿಗಳನ್ನು ಬಹುಮಾನದೊಂದಿಗೆ ಸನ್ಮಾನಿಸಲಾಗುವುದು ಎಂದ ಅವರು ಕೆಂಪೇಗೌಡರು ಗಂಗೆ ಗೌರಿ ವಿಲಾಸ ಎನ್ನುವ ಕೃತಿಯನ್ನು ಬರೆದಿದ್ದಾರೆ ಎಂದರು. ಸಂಪನ್ಮೂಲ ವ್ಯಕ್ತಿ ಉಪನ್ಯಾಸಕ ವೆಂಕಟೇಶ್ ಮಾತನಾಡಿ ಕರ್ನಾಟಕ ರಾಜ್ಯದಲ್ಲಿ ಅನೇಕ ಪಾಳೇಗಾರರು ಆಳಿದ್ದಾರೆ ಅದರಲ್ಲಿ ಕೆಂಪೆಗೌಡರು ಪ್ರಮುಖರಾಗಿದ್ದಾರೆ, ಇವರು ನಮ್ಮ ಸಂಸ್ಥೃತಿ, ಕಲೆ, ಸಾಹಿತ್ಯ, ಬಾಷೆಗೆ, ಅಭವೃದ್ದಿಗೆ ಒತ್ತು ನೀಡಿದ್ದಾರೆ, ಇವರು ವಿಜಯನಗರ ಅರಸರ ಪ್ರೀತಿಗೆ ಪಾತ್ರರಾಗಿದ್ದರು, ನಾಡ ಪ್ರಭು ಕೆಂಪೇಗೌಡರ ಅಪಾರ ಕೊಡಿಗೆಯನ್ನು ಮನಗೊಂಡ ಕೇಂದ್ರ ಮತ್ತು ರಾಜ್ಯದ ಸರ್ಕಾರಗಳು ಬೆಂಗಳೂರು ಅಂತರಾಷ್ಟೀಯ ವಿಮಾನಕ್ಕೆ ಕೆಂಪೆಗೌಡರ ಹೆಸರು ಹಿಟ್ಟಿದ್ದು ಅಲ್ಲಿ ಅವರ ಬೃಹತ್ ಪ್ರತಿಮೆಯನ್ನು ಅನಾವರಣ ಮಾಡಿದೆ ಇಂತಹ ಧೀಮಂತ ನಾಯಕರ ಜಯಂತಿ ಆಚರಣೆ ನಮ್ಮೆಲ್ಲರ ಸೌಭಾಗ್ಯ ಎಂದರು

ಒಂದು ಎಕರೆ ಭೂಮಿ ? ಒಕ್ಕಲಿಗರ ಸಂಘದ ಮನವಿ ಮೇರೆಗೆ ಜನಾಂಗದ ಶೈಕ್ಷಣಿಕ, ಸಾಮಾಜಿಕ ಅಭಿವೃದಿಗೆ ಸಂಘಕ್ಕೆ ಒಂದು ಎಕರೆ ಭೂಮಿಯನ್ನು ಮಂಜೂರು ಮಾಡಲು ಎಲ್ಲಾ ರೀತಿ ಅಗತ್ಯ ಕ್ರಮ ಕೈಗೊಳ್ಳುವಂತೆ ಗೃಹ ಸಚಿವರಾದ ಡಾ.ಜಿಪರಮೇಶ್ವರ ಆದೇಶಿಸಿದಾರೆ, ತಾಲ್ಲೂಕು ಆಡಳಿತ ಈ ಕೆಲಸವನ್ನು ಕೈಗೆತ್ತಿಕೊಂಡಿದೆ ಭೂಮಿಯ ಲಭ್ಯತೆ ನೋಡಿ ಅಗತ್ಯ ಬಿದ್ದಲ್ಲಿ ಎರಡು ಎಕರೆ ಭೂಮಿ ಮಂಜೂರು ಮಾಡಲಾಗುವುದು ಎಂದು ತಹಶೀಲ್ದಾರ್ ಮಂಜುನಾಥ್ ಕೆಂಪೇಗೌಡರ ಜಯಂತಿಯಲ್ಲಿ ತಿಳಿಸಿದರು. ಕಾರ್ಯಕ್ರಮದಲ್ಲಿ ತಾ.ಪಂ ಇ.ಓ ಅಪೂರ್ವ, ತಾಲ್ಲೂಕು ಮಟ್ಟದ ಅಧಿಕಾರಿಗಳಾದ ನಟರಾಜು, ಅನಂತರಾಜು, ರವಿ, ಶಿಲ್ಪ, ಅಂಬಿಕಾ, ಯಮುನಾ, ನಾಗಭೂಷಣ್, ರುದ್ರಪ್ಪ, ಸರ್ಕಾರಿ ನೌಕರ ಸಂಘದ ಅಧ್ಯಕ್ಷ ರುದ್ರೇಶ್, ಕಸಾಪ ಅಧ್ಯಕ್ಷ ಈರಣ್ಣ, ವಕ್ಕಲಿಗ ಸಂಘಧ ಅಧ್ಯಕ್ಷ ರಂಗನರಸಯ್ಯ, ಜನಾಂಗ ಮುಖಂಡರುಗಳಾದ ಪಟ್ಟನರಸಪ್ಪ, ಈಶ್ವರಯ್ಯ, ಕಾಮರಾಜು, ಗಟ್ಲಹಳ್ಳಿಕುಮಾರ್, ನರಸಿಂಹರಾಜು, ವೆಂಕಟಪ್ಪ, ಎಲ್.ವಿ.ಪ್ರಕಾಶ್, ಜಯಮ್ಮ ಲಕ್ಷಮ್ಮ, ಲಕ್ಷ್ಮೀಶ್, ದಾಸರಹಳ್ಳಿ ರಮೇಶ್, ಸಾಕರಾಜು, ಹನುಮಂತರಾಯಪ್ಪ, ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಹೂವಿನ ಬಣ್ಣಗಳ ಅರ್ಥವು ಶ್ರೀಮಂತ ಮತ್ತು ವೈವಿಧ್ಯಮಯವಾಗಿದೆ: ವರಲಕ್ಷ್ಮಿ.ಬಿ.ಎಸ್



ಹೊಸಕೋಟೆ: ಹೂವಿನ ಬಣ್ಣದ ಸಂಕೇತಗಳ ಆಕರ್ಷಕ ಜಗತ್ತಿನಲ್ಲಿ ಮತ್ತು ಮಾನವ ಭಾವನೆಗಳ ಮೇಲೆ ಅದರ ಆಳವಾದ ಪ್ರಭಾವವನ್ನು ಪರಿಶೀಲಿಸಲು ನಮ್ಮ ಶಾಲೆಯಲ್ಲಿ ಹೂವಿನ ದಿನಾಚರಣೆಯನ್ನು ಆಚರಿಸಲಾಯಿತು ಎಂದು ರೈನ್ ಬೋ ಇನ್ನೋವೇಟ್ ಅಕಾಡೆಮಿ ಶಾಲೆ ಮತ್ತು ರೈನ್ ಬೋ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಸಂಸ್ಥಾಪಕರಾದ ವರಲಕ್ಷ್ಮಿ.ಬಿ.ಎಸ್. ರವರು ತಿಳಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯ ರೈನ್ ಬೋ ಇನ್ನೋವೇಟ್ ಅಕಾಡೆಮಿ ಶಾಲೆ ಮತ್ತು ರೈನ್ ಬೋ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಸಹಯೋಗದಲ್ಲಿ ಬೂದಿಗೆರೆ ಕ್ರಾಸ್ ಇಲ್ಲಿ ಹಮ್ಮಿಕೊಂಡಿದ್ದ ಅದ್ದೂರಿ *ಹೂವಿನ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹೂವಿನ ಬಣ್ಣಗಳ ಅರ್ಥವು ಶ್ರೀಮಂತ ಮತ್ತು ವೈವಿಧ್ಯಮಯವಾಗಿದೆ, ಪ್ರತಿ ವರ್ಣವು ವಿಶಿಷ್ಟವಾದ ಭಾವನೆ, ಸಂದೇಶ ಮತ್ತು ಸಂಕೇತಗಳನ್ನು ತಿಳಿಸುತ್ತದೆ.

ಅದೇ ರೀತಿ ವಿದ್ಯಾರ್ಥಿಗಳು ಒಂದು ನಿರ್ದಿಷ್ಟ ಗುರಿಯನ್ನು ಇಟ್ಟುಕೊಳ್ಳಬೇಕು ಆ ನಿಟ್ಟಿನಲ್ಲಿ ಪ್ರಯತ್ನಿಸಬೇಕು ಆಗ ಯಶಸ್ಸು ಸಿಗುತ್ತದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳು ವಿವಿಧ ಬಣ್ಣದ ಹೂವಿನ ಉಡುಪುಗಳನ್ನು ಧರಿಸಿ ಕಾರ್ಯಕ್ರಮಕ್ಕೆ ಮೆರುಗು ತಂದರು.

ಈ ಸಂದರ್ಭದಲ್ಲಿ ಸಂಸ್ಥಾಪಕರಾದ ವರಲಕ್ಷ್ಮಿ.ಬಿ.ಎಸ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹರ್ಷಿತ.ಎಸ್ ಮತ್ತು ಪ್ರಾಂಶುಪಾಲರಾದ ಮಂಜುನಾಥ್.ಆರ್.ಎ ಸೇರಿದಂತೆ ಶಾಲೆ ಮತ್ತು ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ಮಕ್ಕಳು ಇದ್ದರು.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಸೋಮವಾರ 01 ಜುಲೈ 2024
MONDAY 01 July 2024

# ಅನಾಹುತಗಳ ತಡೆಗೆ ಮುಂಜಾಗ್ರತೆವಹಿಸಲು ಸೂಚನೆ




ಹಾಸನ : ಹವಾಮಾನ ಇಲಾಖೆಯ ವರದಿಯಂತೆ ಈ ಬಾರಿ ಹೆಚ್ಚು ಮಳೆಯಾಗುವ ನಿರೀಕ್ಷೆ ಇದ್ದು, ಜಿಲ್ಲೆಯಲ್ಲಿ ಯಾವುದೇ ಅನಾಹುತಗಳು ನಡೆಯದಂತೆ ತಡೆಯಲು ಮುಂಜಾಗ್ರತೆವಹಿಸಿ ಅಗತ್ಯ ಸಿದ್ದತೆಗೆ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಸತ್ಯಭಾಮ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ನಗರದ ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರಿದ ಸಭೆಯಲ್ಲಿ ಮಾತನಾಡಿದ ಅವರು, ಈ ಹಿಂದಿನ ವರ್ಷಗಳಲ್ಲಿ ಪದೇ ಪದೇ ಭೂಕುಸಿತವಾಗಿರುವ ಸ್ಥಳಗಳನ್ನು ಈಗಾಗಲೇ ಗುರುತಿಸಿದ್ದು, ಅಧಿಕಾರಿಗಳು ಎಚ್ಚರವಹಿಸಿ ಕ್ರಮಕೈಗೊಳ್ಳಬೇಕು, ಎಸ್.ಡಿ.ಆರ್.ಎಫ್ ತಂಡ ಸಿದ್ದವಿರಬೇಕು. ಜಿಲ್ಲೆಯಲ್ಲಿ ಮಳೆಯಿಂದ ಭಾಗಶಃ ಹಾನಿಯಾಗಿರುವ ಮನೆಗಳಿಗೆ ಪರಿಹಾರ ನೀಡುವಂತೆ ನಿರ್ದೇಶನ ನೀಡಿದ ಜಿಲ್ಲಾಧಿಕಾರಿಯವರು ಮಣ್ಣಿನ ಗೋಡೆಗಳು ಮಳೆಯಿಂದ ನೆನೆದು ಬೀಳು ಸಾಧ್ಯತೆಯಿರುತ್ತದೆ ಜನರಿಗೆ ತಿಳುವಳಿಕೆ ನೀಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮಳೆ ಗಾಳಿಂದ ಹಾಳಾಗಿರುವ ವಿದ್ಯುತ್ ಕಂಬಗಳ ಬದಲಾವಣೆ ಹಾಗೂ ವಿದ್ಯುತ್ ತಂತಿಗಳನ್ನು ಸರಿಪಡಿಸಲು ಕ್ರಮವಹಿಸಿ ಎಂದು ಚೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು. ಸಿಡಿಲಿನಿಂದ ಸಂಭವಿಸಿರುವ ಸಾವಿಗೆ ಪರಿಹಾರ ನೀಡಲಾಗಿದೆಯೇ ಎಂಬುದನ್ನು ಪರಿಶೀಲಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು. ಕುಡಿಯುವ ನೀರು ಕಲುಷಿತಗೊಳ್ಳದಂತೆ ನಿಗಾವಹಿಸಿ ನೀರಿನ ಮಾದರಿಗಳನ್ನು ಪರೀಕ್ಷೆ ಮಾಡಲು ಕ್ರಮಕೈಗೊಳ್ಳಲು ಅಧಿಕಾರಿಗಳಿಗೆ ತಿಳಿಸಿದರು. ಸೊಳ್ಳೆಗಳಿಂದ ಹರಡುವ ರೋಗಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ಎಚ್ಚರವಹಿಸಿ ಸೊಳ್ಳೆಗಳು ಉತ್ಪತ್ತಿಯಾಗದಂತೆ ಸ್ವಚ್ಛವಾಗಿಟ್ಟುಕೊಳ್ಳುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಎಂದು ತಿಳಿಸಿದರು.

## ಅಧಿಕಾರಿಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಿ: ಡಿಸಿ

ವನ್ಯಜೀವಿಗಳ ಹಾವಳಿಯಿಂದ ಜೀವ ಹಾನಿ ತಡೆಗಟ್ಟುವ ನಿಟ್ಟಿನಲ್ಲಿ ಅಧಿಕಾರಿಗಳು ಸಮನ್ವಯತೆಯಿಂದ ಒಂದು ತಂಡವಾಗಿ ಕರ್ತವ್ಯನಿರ್ವಹಿಸಬೇಕು. ಚಿರತೆ, ಕರಡಿ ಮತ್ತಿತರ ವನ್ಯ ಜೀವಿಗಳು ಪೊದೆಗಳಲ್ಲಿ ಅಡಗಿ ಕುಳಿತಿರುವುದು ಮನುಷ್ಯರಿಗೆ ಗೊತ್ತಾಗುವುದಿಲ್ಲ ಇವುಗಳನ್ನು ತೆರವುಗೊಳಿಸಿದರೆ ಜೀವ ಹಾನಿ ತಪ್ಪಿಸಲು ಸಹಾಯವಾಗುತ್ತದೆ. ವನ್ಯಜೀವಿಗಳ ಹಾವಳಿಯಿಂದ ಜೀವ ಹಾನಿ ತಡೆಗಟ್ಟಲು ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ಗುರುತಿಸಿರುವ 330 ಹಳ್ಳಿಗಳಲ್ಲಿ ರಸ್ತೆಗಳ ಎರಡು ಬದಿಗಳಲ್ಲಿ ಬೆಳೆದಿರುವ ಪೊದೆಗಳನ್ನು ಸ್ವಚ್ಛ ಮಾಡಲು ಗ್ರಾಮ ಪಂಚಾಯಿತಿ ಮೂಲಕ ಕ್ರಮವಹಿಸುವಂತೆ ತಿಳಿಸಿದರು. ಜಾಲಿಗಿಡದಲ್ಲಿ ಚಿರತೆಗಳು ಸೇರಿ ಕೊಳ್ಳುವುದರಿಂದ ಖಾಸಗಿ ಜಮೀನಿಲ್ಲಿ ಜಾಲಿಗಿಡಗಳು ಬೆಳೆದಿದ್ದರೆ ಅವುಗಳನ್ನು ತೆರವುಗೊಳಿಸಲು ಜಮೀನು ಮಾಲೀಕರಿಗೆ ತಿಳಿಸಿ, ಕೆರೆ ಅಂಗಳದಲ್ಲಿ ಬೆಳೆದಿರುವ ಜಾಲಿಗಿಡಗಳನ್ನು ಗ್ರಾಮ ಪಂಚಾಯಿತಿಯಿಂದ ತೆರವುಗೊಳಿಸಲು ವಿಶೇಷ ಆದ್ಯತೆ ನೀಡಿ. ಗ್ರಾ. ಪಂ ಮತ್ತು ಅರಣ್ಯ ಇಲಾಖೆಯವರು ಜಂಟಿಯಾಗಿ ಸಾರ್ವಜನಿಕರಿಗೆ ಅರಿವು ಮೂಡಿಸಲು ಕ್ರಮವಹಿಸಿ ಎಂದರಲ್ಲದೆ, ಬೀದಿ ದೀಪಗಳು ಇರುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು. ಆನೆ ಸಂಚರಿಸುವ ಬಗ್ಗೆ ಜನರಿಗೆ ಮಾಹಿತಿ ನೀಡಿ ಮುನ್ನೆಚ್ಚರಿಕೆವಹಿಸಲು ಅಧಿಕಾರಿಗಳು ಕ್ರಮವಹಿಸಲು ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಚಂದ್ರಶೇಖರ್, ಉಪ ವಿಭಾಗಾಧಿಕಾರಿ ಶ್ರುತಿ, ಜಿಲ್ಲಾ ನಗರಾಭಿವೃದ್ಧಿಕೊಶದ ಯೋಜನಾ ನಿರ್ದೇಶಕ ಬಿ.ಎ.ಜಗದೀಶ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್ ಸೇರಿದಂತೆ ಇತರರು ಹಾಜರಿದ್ದರು.

## ಶುಭಾರಂಭಗೊಂಡಿದೆ ಪರಂಪರಾಸ್ ಡ್ರೈ ಫ್ರೂಟ್ಸ್



ಸಾಗರದ ನೂತನ ಖಾಸಗಿ ಬಸ್ ನಿಲ್ದಾಣದ ಎದುರು SGT ಕಾಂಪ್ಲೆಕ್ಸ್ ನಲ್ಲಿ ರಜಿನಿ ಫಣಿ ಕುಮಾರ್ ರವರ ಮಾಲಿಕತ್ವ ದಲ್ಲಿ ನೂತನವಾಗಿ ಪರಂಪರಾಸ್ ಡ್ರೈ ಫ್ರೂಟ್ಸ್ ಎಂಬ ಡ್ರೈ ಫ್ರೂಟ್ಸ್ ನ ಮಳಿಗೆಯನ್ನು ಸಾಗರ ಹೊಸ ಬಸ್ ನಿಲ್ದಾಣದ ಎದುರು ಶ್ರೀಮತಿ ರಾಜನಂದಿನಿ ಕಾಗೋಡು ಅವರು ಅಂಗಡಿ ಮಾಲೀಕರು ರಜಿನಿ ಫಣಿಕುಮಾರ್. ಪಣಿಕುಮಾರ್ ಅವರ ಕುಟುಂಬ ಹಾಜರಿದ್ದರು...

## ಗ್ರಾಮೀಣ ಭಾಗದ ಜನತೆ ಹೈನುಗಾರಿಕೆಗೆ ಹೆಚ್ಚು ಒತ್ತು ನೀಡುವ ಮೂಲಕ ಆರ್ಥಿಕವಾಗಿ ಸಬಲರಾಗಬೇಕು

ಕೆ.ಆರ್.ಪೇಟೆ: ಗ್ರಾಮೀಣ ಭಾಗದ ಜನತೆ ಹೈನುಗಾರಿಕೆಗೆ ಹೆಚ್ಚು ಒತ್ತು ನೀಡುವ ಮೂಲಕ ಆರ್ಥಿಕವಾಗಿ ಸಬಲರಾಗಬೇಕು ಎಂದು ಮನ್ಮುಲ್ ನಿರ್ದೇಶಕ ಕೆ. ರವಿ (ಡಾಲು ರವಿ) ಹೇಳಿದರು

ತಾಲ್ಲೂಕಿನ ಕಸಬಾ ಹೋಬಳಿಯ ಕಾಮನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ಕಾಮಗಾರಿ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.ಗ್ರಾಮದಲ್ಲಿ ಸಂಘದ ನೂತನ ಕಟ್ಟಡವನ್ನು ನಿರ್ಮಾಣ ಮಾಡಲಾಗುತ್ತಿದ್ದು, ಗ್ರಾಮಸ್ಥರು ಹಾಗೂ ಸಂಘದ ಪದಾಧಿಕಾರಿಗಳು ಗುಣಮಟ್ಟದ ಕಾಮಗಾರಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಮನವಿ ಮಾಡಿ.ಹಾಲು ಉತ್ಪಾದಕ ಸಂಘಗಳು ಉಳಿಯಬೇಕಾದರೆ ರೈತರು ಗುಣಮಟ್ಟದ ಹಾಲು ನೀಡಬೇಕು. ಭೀಕರ ಬರಗಾಲದಲ್ಲಿಯೂ ನಮ್ಮ ಜಿಲ್ಲೆಯುಲ್ಲಿ ಹಾಲಿನ ಉತ್ಪಾದನೆ ಗಣನೀಯವಾಗಿ ಹೆಚ್ಚಾಗುತ್ತಿರುವುದು ಸಂತಸದ ಸಂಗತಿ. ಹೈನುಗಾರಿಕೆಯನ್ನೇ ಕುಲಕಸುಬನ್ನಾಗಿ ಮಾಡಿಕೊಂಡು ಜೀವನ ಮಾಡುತ್ತಿರುವವರು ಒಕ್ಕೂಟದಲ್ಲಿ ಹಾಲು ಉತ್ಪಾದಕರಿಗೆ ಇರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ರೈತರಿಗೆ ಒಳ್ಳೆಯ ತಳಿಯ ಹಸು ಸಾಕಬೇಕು ಎಂದು ಆಸೆ ಇರುತ್ತದೆ. ಆದರೆ ಅವುಗಳ ಪೋಷಣೆ ಮಾಡುವುದು ಅಷ್ಟೇ ಮುಖ್ಯವಾಗಿರುತ್ತದೆ. ಹೆಚ್ಚು ಹಾಲು ನೀಡುವ ಹಸುಗಳನ್ನು ಹೆಚ್ಚು ಮುತುವರ್ಜಿಯಿಂದ ನೋಡಿಕೊಳ್ಳಬೇಕಾಗುತ್ತದೆ. ಅವುಗಳ ನಿರ್ವಹಣಾ ವೆಚ್ಚ ಕೂಡ ದುಬಾರಿಯಾಗಿರುತ್ತದೆ. ಆದ್ದರಿಂದ ರೈತರು ತಮ್ಮ ಆರ್ಥಿಕ ಶಕ್ತಿ, ಮೂಲಸೌಕರ್ಯಕ್ಕೆ ಅನುಗುಣವಾಗಿ ಹಸುಗಳನ್ನು ಸಾಕುತ್ತ,ನಾವು ಸಂಘಕ್ಕೆ ನೀಡುವ ಹಾಲು ಬೇರೆ ದೇಶಗಳಿಗೆ ರಫ್ತಾಗುತ್ತದೆ. ಆದ್ದರಿಂದ ರೈತರು ಪ್ರತಿ ಹಂತದಲ್ಲೂ ಶುಚಿತ್ವ ಕಾಪಾಡಿಕೊಳ್ಳಬೇಕು. ಹಾಲು ತರುವ ಪಾತ್ರೆಗಳನ್ನು ಶುಚಿಯಾಗಿಟ್ಟುಕೊಳ್ಳಬೇಕು ನಮ್ಮ ತಾಲೂಕಿನಲ್ಲಿ ಇವತ್ತು ಹೆಚ್ಚಿನ ಸಂಖ್ಯೆಯ ಜನರು ಹೈನುಗಾರಿಕೆ ನೆಚ್ಚಿ ಬದುಕುತ್ತಿದ್ದಾರೆ. ಹಾಲು ಪೌಷ್ಟಿಕ ಆಹಾರವಾಗಿದೆ. ರೈತರು ಕರೆದ ಹಾಲನ್ನೆಲ್ಲ ಸಂಘಕ್ಕೆ ಮಾರಾಟ ಮಾಡುವ ಬದಲು ತಾವು ಸೇವಿಸಬೇಕು.ಮಕ್ಕಳಿಗೂ ನೀಡಬೇಕು. ಅದರಿಂದ ಆರೋಗ್ಯ ಕೂಡ ಉತ್ತಮ ರೀತಿಯಲ್ಲಿರುತ್ತದೆ' ಎಂದು ಹೇಳಿದರು.



ಈ ಸಂದರ್ಭದಲ್ಲಿ ತಾ.ಪಂ ಮಾಜಿ ಸದಸ್ಯ ಚೌಡೇನಹಳ್ಳಿ ನಾಗರಾಜು,ಸಂಘದ ಅಧ್ಯಕ್ಷೆ ನವೀನ ಕೆ.ಜೆ ಉಪಾಧ್ಯಕ್ಷೆ ಮೀನಾಕ್ಷಿ, ನಿರ್ದೇಶಕರಾದ ವರಲಕ್ಷ್ಮಿ, ವಸಂತ, ನಾಗಮ್ಮ, ಇಂದ್ರಮ್ಮ, ಭವ್ಯ ಗೀತಾ, ಹೊನ್ನಮ್ಮ, ಸಾವಿತ್ರಮ್ಮ, ಲಕ್ಷ್ಮಮ್ಮ,ಆಶಾ ಅಶೋಕ್, ಸಂಘದ ಕಾರ್ಯದರ್ಶಿ ಎನ್. ವರಲಕ್ಷ್ಮಿ, ಹಾಲು ಪರೀಕ್ಷಕಿ ನಾಗರತ್ನ, ಸಹಾಯಕಿ ರೇಖಾ, ಗ್ರಾ. ಪಂ ಮಾಜಿ ಅಧ್ಯಕ್ಷ ವಿಜಯ ಕುಮಾರ್,ಮಾಜಿ ಸದಸ್ಯ ಗಿರೀಗೌಡ,ಹಿರಿಯ ಮುಖಂಡ ಬಾಣೇಗೌಡ,ಕೆ.ಎಂ ಮಂಚೇಗೌಡ,ಸ್ವಾಮಿಗೌಡ, ಶಿವಲಿಂಗಗೌಡ, ಅಣ್ಣೆಗೌಡ, ಕಾಂತರಾಜು, ಗಂಗಾಧರ್, ಅಶೋಕ್, ಸ್ವಾಮೀಗೌಡ, ಮಂಚೇಗೌಡ, ಕೆ. ಆರ್ ಜವರೇಗೌಡ,ಕೃಷ್ಣಗೌಡ, ಶ್ರೀಧರ್,ಸೇರಿದಂತೆ ಉಪಸ್ಥಿತರಿದ್ದರು.

ಸುದ್ದಿಯೊಂದಿಗೆ ಮನು ಮಾಕವಳ್ಳಿ

## ರೈತರು ಹಸುಗಳನ್ನು ಮಕ್ಕಳಂತೆ ಜೋಪಾನ ಮಾಡಿ ಗುಣಮಟ್ಟದ ಹಾಲು ಸರಬರಾಜು ಮಾಡಿ

ಕೆ.ಆರ್.ಪೇಟೆ: ರೈತರಿಗೆ ಹೈನುಗಾರಿಕೆ ವರದಾನವಾಗಿದ್ದು, ರೈತರು ಹಸುಗಳನ್ನು ಮಕ್ಕಳಂತೆ ಜೋಪಾನ ಮಾಡಿ ಗುಣಮಟ್ಟದ ಹಾಲು ಸರಬರಾಜು ಮಾಡಿ ಆರ್ಥಿಕವಾಗಿ ಸದೃಢರಾಗಬೇಕು ಎಂದು ಮನ್ಮುಲ್ ನಿರ್ದೇಶಕ ಮತ್ತು ಶಾಸಕರಾದ ಹೆಚ್.ಟಿ ಮಂಜು ತಿಳಿಸಿದರು.

ತಾಲ್ಲೂಕಿನ ಬೂಕನಕೆರೆ ಹೋಬಳಿಯ ಹಳೇಯೂರು ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಆವರಣದಲ್ಲಿ ನೆಡೆದ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಉದ್ಘಾಟಿಸಿ ಮಾತನಾಡಿದರು.ಪ್ರತಿಯೊಬ್ಬ ಉತ್ಪಾದಕರು ರಾಸುಗಳಿಗೆ ಜೀವ ವಿಮೆ ಮಾಡಿಸಿಕೊಳ್ಳಬೇಕು ಇಂದು ದೇಶದಲ್ಲಿ ಹೈನುಗಾರಿಕೆ ಅತಿ ವೇಗವಾಗಿ ಬೆಳೆಯುತ್ತಿರುವುದರಿಂದ ರೈತರು ಹೈನುಗಾರಿಕೆಗೆ ಹೆಚ್ಚು ಒತ್ತು ನೀಡಬೇಕು ಒಕ್ಕೂಟದಿಂದ ದೊರೆಯುವ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಂಡು ರೈತರು ಆರ್ಥಿಕವಾಗಿ ಅಭಿವೃದ್ಧಿಗೊಳ್ಳಬೇಕು ಮತ್ತು ಅಮೃತ ಸಮಾನವಾದ ಅಚ್ಚ ಹಾಲಿಗೆ ಸಕ್ಕರೆ, ನೀರು, ಉಪ್ಪನ್ನು ಕಲಬೆರಕೆ ಮಾಡಿದರೆ ಆಹಾರ ಸುರಕ್ಷತ ಕಾಯ್ದೆ ಪ್ರಕಾರ ದಂಡದ ಜೊತೆಗೆ ಜೈಲು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಸಂಘಕ್ಕೆ ಉತ್ತಮ ಗುಣಮಟ್ಟದ ಹಾಲನ್ನು ಪೂರೈಕೆ ಮಾಡುವುದರಿಂದ ಸಂಘವು ಅಭಿವೃದ್ಧಿ ಹೊಂದುವುದಲ್ಲದೆ ನಿಮ್ಮ ಆರ್ಥಿಕ ವ್ಯವಸ್ಥೆಯು ಪ್ರಗತಿ ಹೊಂದಲು ಸಾಧ್ಯವಾಗುತ್ತದೆ ಎಂದು ಅರಿವು ಮೂಡಿಸಿದರು.



ಬಳಿಕ ಮಾತನಾಡಿದ ಮಂಡ್ಯ ಜಿಲ್ಲಾ ಹಾಲು ಒಕ್ಕೂಟ ನಿರ್ದೇಶಕ ಡಾಲು ರವಿ ಸಂಘವು ಉತ್ತಮ ಗುಣಮಟ್ಟದ ಹಾಲನ್ನು ಪೂರೈಕೆ ಮಾಡುತ್ತಿರುವುದರಿಂದ ಸಂಘವು ಹೆಚ್ಚಿನ ಲಾಭ ಗಳಿಸಲು ಸಾಧ್ಯವಾಗಿದೆ. ಉತ್ಪಾದಕರಿಗೆ ಗುಣಮಟ್ಟಕ್ಕೆ ತಕ್ಕಂತೆ ದರ ನೀಡುತ್ತಿರುವುದರಿಂದ ಹೈನುಗಾರಿಕೆಯು ರೈತರ ಜೀವನಕ್ಕೆ ಸಹಕಾರಿಯಾಗಿದೆ ಹಾಲು ಉತ್ಪಾದಕರ ಸಹಕಾರ ಸಂಘಗಳು ನಡೆಸುವ ಸಾಮಾನ್ಯ ಸಭೆಯಲ್ಲಿ ಪ್ರತಿ ಸದಸ್ಯರು ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದರ ಜತೆಗೆ ಸಂಘಗಳ ಅಭಿವೃದ್ಧಿಗೆ ಸಲಹೆ ಸೂಚನೆಗಳನ್ನು ನೀಡಬೇಕು ಎಂದರು.

ಸಂಘಕ್ಕೆ 2023–24 ನೇ ಸಾಲಿನ ಅತೀ ಹೆಚ್ಚು ಹಾಲು ಸರಬರಾಜು ಮಾಡಿದ ಉತ್ಪಾದಕರಿಗೆ ಬಹುಮಾನ ನೀಡಿ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಸಂಸ್ಥಾಪಕರಾದ ಹೆಚ್.ಎಂ ಮಾಸ್ತಿಗೌಡ,ಮಾರ್ಗ ವಿಸ್ತರಣಾಧಿಕಾರಿ ರಘುವೇಂದ್ರ,ಸಂಘದ ಅಧ್ಯಕ್ಷೆ ಅನುರಾಧ, ಬಿ.ವಿ ಜ್ಯೋತಿ ನಿರ್ದೇಶಕರಾದ ಮಂಜುಳ,ಪ್ರೇಮ, ಸಣ್ಣತಾಯಮ್ಮ, ಲಲಿತಮ್ಮ, ಶಕುಂತಲಾ, ಗಾಯಿತ್ರಿ, ಇಂದ್ರಮ್ಮ, ರಾಜಮ್ಮ,ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್,ಕಾರ್ಯದರ್ಶಿ ಕವಿತ, ಹಾಲು ಪರೀಕ್ಷಕಿ ದೀಪಿಕ ಸೇರಿದಂತೆ ಉಪಸ್ಥಿತರಿದ್ದರು.

ಸುದ್ಧಿಯೊಂದಿಗೆ ಮನು ಮಾಕವಳ್ಳಿ ಕೆ ಆರ್ ಪೇಟೆ

## ಮೀನುಗಾರಿಕೆ ಸಲಕರಣೆಗಳ ಕಿಟ್ ವಿತರಣೆ ಮಾಡಿದ ಶಾಸಕ ಎ.ಆರ್.ಕೃಷ್ಣಮೂರ್ತಿ

ಯಳಂದೂರು ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗದಲ್ಲಿ ಮೀನುಗಾರಿಕೆ ಇಲಾಖೆ ವತಿಯಿಂದ ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯಳಂದೂರು ಕೊಳ್ಳೇಗಾಲ ಸಂತೇಮರಹಳ್ಳಿ ಭಾಗದ ಗ್ರಾಮಗಳ ಫಲಾನುಭವಿಗಳಿಗೆ ಶಾಸಕರಾದ ಎ ಆರ್ ಕೃಷ್ಣಮೂರ್ತಿ ರವರ ಸಮ್ಮುಖದಲ್ಲಿ ಒಟ್ಟು 46 ಫಲಾನುಭವಿಗಳಿಗೆ ಮೀನುಗಾರಿಕೆ ಇಲಾಖೆ ವತಿಯಿಂದ ಸಾಧನಾ ಸಲಕರಣೆಗಳನ್ನು ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಸರ್ಕಲ್ ಇನ್ಸ್ಪೆಕ್ಟರ್ ಶ್ರೀಕಾಂತ್. ಸಹಾಯಕ ನಿರ್ದೇಶಕರಾದ ಪ್ರಶಾಂತ್.ವಿನೋದ್.ಜಿಲ್ಲಾಪಂಚಾಯತ್ ಮಾಜಿ ಸದಸ್ಯ ಯೋಗೇಶ್.ವಡಗೆರೆ ದಾಸ್.ರಾಘವಾ.ಚೇತನ್.ಮಹದೇವಯ್ಯ.ನಿಂಗಯ್ಯ.ಮಹೇಶ್ ಇತರರು ಇದ್ದರು



## ಅಮೃತ ಯೋಜನೆ ಗುದ್ದಲಿ ಪೂಜೆ ನೆರವೇರಿಸಿದ ಶಾಸಕ ಸಿಮೆಂಟ್ ಮಂಜುನಾಥ್....

ಆಲೂರು ತಾಲೂಕಿನ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಇಂದು ಆಲೂರು ಕಟ್ಟಾಯ ಸಕಲೇಶಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಸಿಮೆಂಟ್ ಮಂಜು ಅವರು ಅಮೃತ್ ಯೋಜನೆ, ಗುದ್ದಲಿ ಪೂಜೆಯನ್ನು ನೆರವೇರಿಸಿದರು ನಂತರ ಮಾತಾಡುತ...ಈ ಯೋಜನೆ

ಐದು ಕೋಟಿ ಹದಿನೇಳು ಲಕ್ಷ ಕಾಮಗಾರಿಯಾಗಿದ್ದು ಇದರಿಂದ ಆಲೂರು ನಗರ ಪ್ರದೇಶದಲ್ಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕನಿಷ್ಠ 3000 ಜನಗಳಿಗೆ ಶುದ್ಧ ಕುಡಿಯುವ ನೀರನ್ನು ಕೊಡಬೇಕೆಂಬ ಕಾರ್ಯಕ್ರಮ ಇದು ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಎಲ್ಲವನ್ನು ಸರಿ ಮಾಡುವಂತಹ ಕೆಲಸವನ್ನು ಮಾಡುತಿದ್ದೇವೆ ನಮ್ಮೆಲ್ಲರ ಉದ್ದೇಶ ಒಂದೇ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರತಿ ಮನೆಗೂ ಶುದ್ಧ ನೀರನ್ನು ಕೊಡಬೇಕು ಯಾವುದೇ ಮನೆಗೂ ಕೂಡ ನೀರಿನ ಸಮಸ್ಯೆ ಉಂಟಾಗಬಾರದೆಂದು ಹಾಗೆ ಗುತ್ತಿಗೆದಾರರಲ್ಲಿ ಮನವಿ ಮಾಡುವುದುಧೇನೆಂದರೆ ಈ ಕಾಮಗಾರಿಯನ್ನು ಆದಷ್ಟು ಗುಣಮಟ್ಟದಿಂದ ಕೆಲಸವನ್ನು ಮಾಡಿ ಆದಷ್ಟು ಶೀಘ್ರವಾಗಿ ಕೆಲಸ ಮುಗಿಸಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿನ ಯಾವ ಮನೆಗೂ ನೀರಿನ ಸಮಸ್ಯೆ ಉಂಟಾಗಬಾರದು ಕಾಮಗಾರಿ ಮಾಡುವಾಗ ಯಾವುದೇ ಸಾರ್ವಜನಿಕರ ಆಸ್ತಿಪಾಸ್ತಿಯಾಗಲಿ ರಸ್ತೆ ಆಗಲಿ ಅನಾವಶ್ಯಕವಾಗಿ ಅಗೆದು ತೊಂದರೆ ಆಗದಂತ್ತೆ ನೋಡಿಕೊಳ್ಳಿ ಎಂದರು.



ಇದೆ ಸಂದರ್ಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷರಾದ ಉಮಾರವಿಶಂಕರ್, ಬಿಜೆಪಿ ಮುಖಂಡರಾದ ಕಣಗಲ್ ಲೋಕೇಶ್, ಬೈರಾಪುರ ಗ್ರಾಮ ಪಂಚಾಯತಿ ಸದಸ್ಯರಾದ ರುದ್ರೇಗೌಡ, ಬಿಜೆಪಿ ಮುಖಂಡ ಹನುಮಂತೇಗೌಡ,ಅಜಿತ ಚಿಕ್ಕ ಕಣಗಾಲ್, ನಾಗರಾಜ್ ಹುಲ್ಲಳ್ಳಿ ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ಸ್ಟೀಫನ್ ಪ್ರಕಾಶ್ , ಬಿಜೆಪಿ ಮುಖಂಡರು ಹಾಗೂ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

Printed by : H.L.AMARANATH, Owned by: H.L.AMARANATH, Printed at : SREE MANJUNATHA ENTERPRISES No. 7, Tirugappa lane, Cottonpet cross, Cottonpet, Bangalore-560053.
Published at : No.97, 2nd Cross, Vivekanandanagar, Khadi Commission Layout, BSK 3rd Stage, Kathariguppe Main Road, Bengaluru-560085. Mobile: 9663122276 Editor : H.L.AMARANATH